MR. SPEAKER.—Now I will put Sri G. V. Gowda's amendment. The question is :

" That at page 9, in sub-clause (2) line 2, for the words " Five per cent " the words " Two and a half per cent " shall be substituted.

The amendment was negatived.

MR. SPEAKER.—The question is :

" That clause 13 stand part of the Bill ".

The motion was adopted.

" Clause 13 was added to the Bill "

Clause 1 etc.

MR. SPEAKER.—The question is :

Clause 1, the Title and the Preamble stand part of the Bill.

The motion was adopted.

Clause 1, the Title and the Preamble were added to the Bill.

Motion to Pass.

SRI RAMAKRISHNA HEGDE.—I beg to move:

" That the Mysore Sales Tax (Amendment) Bill, 1966, as amended, be passed."

MR. SPEAKER.—The question is :

"That the Mysore Sales Tax (Amendment) Bill, 1966, as amended, be passed."

The motion was adopted.

Supplementary Demand for grants for 1965-66

(Second Instalment)

ಶ್ರೀ ಎಸ್. ಶಿವಪ್ಪ.—ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಹಣಕಾಸಿನ ಸಚಿವರು ಈ ಸಭೆಯ ಮುಂದೆ ಸಪ್ಲಿಮೆಂಟರಿ ಡಿಮ್ಯಾಂಡ್ ಗಳು ಎಂದು ಎರಡನೇ ಸಾರಿ ತಂದು ಇಲ್ಲಿ ಒಪ್ಪಿಗೆಗಾಗಿ ಇಟ್ಟಿದ್ದಾರೆ. ಇದು ಇಲ್ಲಿಗೆ ಮುಕ್ತಾಯವಾಗುವುದಿಲ್ಲ ಎಂದು ಹೇಳಿ ಕೊನೆಯಲ್ಲಿ ನಾವು ಮೂರನೇ ಇನ್ಸ್‌ಟಾಲ್‌ಮೆಂಟು ಎಂದು ತಂದು ಈ ಸಭೆಯ ಮುಂದೆ ಇಡುತ್ತೇವೆಂದು ಹೇಳುತ್ತಿದ್ದಾರೆ. ಏಕೆಂದರೆ ಮುಂದೆ ಬಡ ನೌಕರರಿಗೆ ಡಿ. ಎ. ಇತ್ಯಾದಿ ಗಳನ್ನು ಕೊಡಬೇಕಾಗಿ ಬರುತ್ತದೆ, ಇವೆಲ್ಲ ಇತ್ಯರ್ಥವಾಗಬೇಕೆಂದು ಹೇಳಿಬಿಟ್ಟಿದ್ದಾರೆ. ಇವುಗಳನ್ನೆಲ್ಲಾ ನೋಡಿದರೆ ನಮ್ಮ ಹಣಕಾಸಿನ ಸಚಿವರಿಗೆ ಹಣ ಕಾಸಿನ ನಿಯಂತ್ರಣವನ್ನು ಸರಿಯಾಗಿ ಮಾಡತಕ್ಕ ಜವಾಬ್ದಾರಿ ಇಲ್ಲ ಎಂದು

ಕಾಣುತ್ತೆ. ಮೈಸೂರು ದೇಶದ ಆಯವ್ಯಯದ ಬಗ್ಗೆ ಮತ್ತು ಹಣಕಾಸಿನ ಪರಿಸ್ಥಿತಿ ಬಗ್ಗೆ ನಮ್ಮ ಮುಂದೆ ಒಂದು ಮುನ್ನೋಚನೆಯ ಚಿತ್ರವನ್ನೂ ಸರಿಯಾಗಿ ಇಟ್ಟಿಲ್ಲ. ಅದಿಲ್ಲದೆ ನಮ್ಮ ದೇಶದ ಹಣಕಾಸಿನ ಪರಿಸ್ಥಿತಿಯ ನಿಜವಾದ ಚಿತ್ರ ಗೊತ್ತಾಗುವುದಿಲ್ಲ. ಯಾವಾಗಲೂ ನಮ್ಮ ಹಣಕಾಸಿನ ಸಚಿವರು ಇತರ ಸಚಿವರುಗಳು ಎಷ್ಟೆಷ್ಟೋ ಟೀಕೆಗಳನ್ನು ನಮ್ಮ ಮುಂದೆ ಇಡುವಾಗ ನಮ್ಮ ದೇಶದ ಹಣಕಾಸಿನ ನೀತಿ ನಿಯಮಗಳನ್ನು ಸರಿಪಡಿಸಲು ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಮಾಡುತ್ತೇವೆ ಎನ್ನುವ ಒಂದು ಮುನ್ನೋಚನೆಯನ್ನು ನನ್ನ ಮುಂದೆ ಇಡ ಬೇಕಾಗಿತ್ತು. ಅದನ್ನು ಮುಂದೆ ಬಜೆಟ್ಟಿನಲ್ಲಿ ಯಾವ ರೀತಿ ಅಳವಡಿಸುತ್ತಾರೆ ಎನ್ನುವುದನ್ನು ತಿಳಿಸುವುದು ಸರಕಾರದವರ ಕರ್ತವ್ಯ.

ಇವತ್ತು ನಮ್ಮ ಮೈಸೂರು ದೇಶದಲ್ಲಿ ಏನಾಗಿದೆ ಎಂದರೆ, ಯಾವ ಹಣಕಾಸಿನ ತಜ್ಞರು ಒಂದು ಹಣಕಾಸಿನ ಮುಂಗಡ ಪತ್ರವನ್ನು ತಯಾರು ಮಾಡಿ ಈ ಸಭೆಯ ಮುಂದೆ ಇಟ್ಟಿದ್ದಾರೋ ಆ ಮುಂಗಡ ಪತ್ರ, ಏರುಪೇರು, ದಿಕ್ಕೂಚಿ ಇಲ್ಲದೆ, ಗೊತ್ತು ಗುರಿ ಇಲ್ಲದೆ ಎಲ್ಲಿ ಹೋಗುತ್ತದೆ ಎಂದು ಅವರು ಕಾಣುತ್ತಿಲ್ಲ. ಇವತ್ತಿನ ಕಾರಣ ಪಂಚಾಯ್ತಿ ಮಂಡಲ, ತಮ್ಮ ಸ್ವೇಚ್ಛೆಯಿಂದ, ತಮ್ಮ ಮನಸ್ಸಿಗೆ ಬಂದ ರೀತಿಯಲ್ಲಿ; ಹೊಸ ಹೊಸ ಆಶ್ವಾಸನೆಗಳನ್ನು ಮಾಡಿ ಮುಂಗಾವಿನಯನ್ನು ಮಾಡುತ್ತಾ ಇದ್ದರೆ, ಹಣಕಾಸಿನ ಚಿತ್ರ ಎಲ್ಲಿ ಬಂದು ನಿಲ್ಲುತ್ತದೆ ಎಂದು ಗೊತ್ತಾಗುತ್ತಿಲ್ಲ. ಇವತ್ತು ನಮ್ಮ ದೇಶದ ಹಣಕಾಸಿನ ಪರಿಸ್ಥಿತಿ ಬಹಳ ವಿಷಮ ಪರಿಸ್ಥಿತಿಯಲ್ಲಿ ನಿಂತಿದೆ. ಇವತ್ತಿನ ದಿವಸ ಅನೇಕ ತೆರಿಗೆಗಳನ್ನು ಹಾಕಬೇಕೆಂದು ಮಸೂದೆಯನ್ನು ತಂದು ಈ ಸಭೆಯಲ್ಲಿ ಇಟ್ಟಿದ್ದಾರೆ ಕೋಟ್ಯಾಂತರ ರೂಪಾಯಿಗಳ ಆದಾಯ ತೆರಿಗೆ ಮಸೂದೆಯನ್ನು ತಂದು ಇಟ್ಟಿದ್ದಾರೆ. ಗಾಭರಿಯಾಗಿ ನಮಗೆ ನಾಲ್ಕನೇ ಪಂಚವಾರ್ಷಿಕ ಯೋಜನೆಗೆ ಆದರೂ ದೇಶದ ಆಹಾರ ಉತ್ಪತ್ತಿ ಅಗಕ್ಕೆ, ಅದಕ್ಕೆ ಹಣಕಾಸು ಇಲ್ಲ, ಅದಕ್ಕೋಸ್ಕರವಾಗಿ ತೆರಿಗೆ ವಸೂಲಿ ಮಾಡಲು ಮಸೂದೆಗಳನ್ನು ಪಾಸು ಮಾಡಿಕೊಡಿ ಎಂದು ಈಗ ತಾನೇ ನಮ್ಮಿಂದ ಮಸೂದೆಯನ್ನು ಪಾಸುಮಾಡಿಸಿಕೊಂಡಿದ್ದಾರೆ. ಇವತ್ತು ಅವರು ಯಾವ ಒಂದು ಉದಾತ್ತ ಧ್ಯೇಯ ಗಳನ್ನು ಹೇಳಿದ್ದಾರೆ ? ಇವತ್ತು ಮೈಸೂರು ದೇಶದ ಹಣಕಾಸಿನ ಪರಿಸ್ಥಿತಿ ಏನಿದೆ ಎನ್ನತಕ್ಕಂಥದ್ದನ್ನು ಎಂಥವರೂ ತಿಳಿದುಕೊಳ್ಳುವುದು ಕಷ್ಟವಾಗಿದೆ. ಏಕೆಂದರೆ, ನಾನು ಮೊದಲೇ ಹೇಳಿದೆ ಹಾಗೆ ಅವರು ಹಾಕುತ್ತಾ ಇರತಕ್ಕದ್ದು ಮತ್ತು ಖರ್ಚು ಮಾಡುತ್ತಿರತಕ್ಕ ವೈಖರಿ ನೋಡಿದರೆ ಮೈಸೂರು ದೇಶದ ಹಣಕಾಸಿನ ಪರಿಸ್ಥಿತಿ ಎಲ್ಲಿ, ಹೇಗೆ ನಿಲ್ಲುತ್ತದೆ ಎಂಬುದು ಶೋಚನೀಯವಾದ ವಿಷಯ. ನಮ್ಮ ದೇಶ ದಿವಾಳಿತನದ ದಾರಿಯಲ್ಲಿ ಹೋಗುತ್ತಿದೆ. ಇವತ್ತು ಹಣಕಾಸಿನ ಪರಿಸ್ಥಿತಿಯನ್ನು ನಾವು ಕೂಲಂಕುಷವಾಗಿ ಪುನರ್‌ವಿಮರ್ಶೆ ಮಾಡಿದರೆ ಮೈಸೂರು ದೇಶದ ಹಣಕಾಸಿನ ಪರಿಸ್ಥಿತಿ ಎಷ್ಟು ಮಟ್ಟಿಗೆ ಇದೆ ಎಂದರೆ, ಹಣಕಾಸಿನ ಮಂತ್ರಿಗಳು ಕೂಡಾ ಅನೇಕ ಸಾರಿ ಈ ಮೈಸೂರು ದೇಶದ ಹಣದ ಚಿತ್ರ ಏನಿದೆ ಎನ್ನುವುದನ್ನು ಆವರೇ ಗಾಬರಿಯಾಗತಕ್ಕ ಮಾತನ್ನಲ್ಲಿ ಹೇಳಿದ್ದಾರೆ. ಇವತ್ತಿನ್ನಾ ನೋಡಿದರೆ ನಮ್ಮ ಮೈಸೂರು ದೇಶದ ಹಣಕಾಸಿನ ಭವ್ಯತೆಯನ್ನು ಸ್ಥಾಪಿಸಲಾಗಿ ವಿಚಾರ ಮಾಡಬೇಕಾದರೆ ಮೈಸೂರಿನಲ್ಲಿ ಒಂದು ಫೈನಾನ್ಷಿಯಲ್ ಎನ್‌ಕ್ವೈರಿ ಕಮಿಶನ್ ಮಾಡಿ ಹಣಕಾಸಿನ ಭವ್ಯತೆ ಏನು ಇದೆ ಎನ್ನುವುದನ್ನು ನೋಪತಕ್ಕ ಕಾಲಬಂದಿದೆ. ಇವತ್ತಿಗೆ ಮೈಸೂರು ಸರ್ಕಾರದವರು ಕೂಡಲೇ ಫೈನಾನ್ಷಿಯಲ್ ಕಮಿಷನ್ ಏರ್ಪಾಡು ಮಾಡಿ, ಅವರ ಮುಖಾಂತರ ಹಣಕಾಸಿನ ಭವ್ಯತೆ ಮತ್ತು ನೈಜವಾದ ಚಿತ್ರ ಏನಿದೆ ಎನ್ನುವುದನ್ನು ದೇಶದ ಮುಂದಿಡತಕ್ಕದ್ದು ಅತ್ಯಗತ್ಯ ಎಂದು ನಾನು ಹೇಳುತ್ತೇನೆ. ಏಕೆಂದರೆ, ಅವರೇ ಹೇಳಿ ನಮ್ಮ ಮಂತ್ರಿಗಳೇ ದಿಗ್ಭ್ರಾಂತರಾಗಿದ್ದಾರೆ. ನಮ್ಮ ಹಣಕಾಸಿನ ಪರಿಸ್ಥಿತಿ ಏನಿದೆ, ರಿಸರ್ವ್ ಬ್ಯಾಂಕಿನಿಂದ 25 ಕೋಟಿ ತೆಗೆದುಕೊಂಡಿದ್ದಾರೋ, 50 ಕೋಟಿ ತೆಗೆದುಕೊಂಡಿದ್ದಾರೋ ಎಷ್ಟುದೂ ಗೊತ್ತಿಲ್ಲ. ಅವರ ಬ್ಯಾಲೆನ್ಸ್ ಏನಿದೆ, ರಿಸರ್ವ್ ಬ್ಯಾಂಕಿನ ಬ್ಯಾಲೆನ್ಸ್ ಏನಿದೆ ಎಂಬ ಚಿತ್ರ ಅವರು ಅರಿತೇ ಇಲ್ಲ. ಇಮ ಸಾಮಾನ್ಯ ಜನತೆಗೆ ಅಥವಾ ಯಾವ ಶಾಸನ ಸಭೆಗೂ ಈ ಪರಿಸ್ಥಿತಿ ಏನಿದೆ ಎನ್ನುವುದೂ ಗೊತ್ತಿಲ್ಲ. ಇವತ್ತಿಗೆ ಒಂದು ಎನ್‌ಕ್ವೈರಿ ಕಮಿಷನ್ ಮಾಡಿ ಮೈಸೂರು ದೇಶಕ್ಕೆ ಮತ್ತು ಶಾಸನ ಸಭೆಗೆಯ ಮುಂದೆ ಈ ಚಿತ್ರವನ್ನು ಕೊಡಬೇಕೆಂದು ತಿಳಿಸುತ್ತೇನೆ. ಅವನ್ನು ಸರ್ಕಾರದವರು ತೀವ್ರವಾಗಿ ಯೋಚನೆ ಮಾಡಬೇಕು.

ಸಭಾಪತಿಯವರೇ, ಈ ಸಪ್ಲಿಮೆಂಟರಿ ಡಿಮಾಂಡ್ ಇತಕ್ಕೆ ಕಾಲದಲ್ಲಿ ನಾಲ್ಕು ಕಾರಣಗಳನ್ನು ನಮೂದು ಮಾಡಿದ್ದಾರೆ. ಇವರು ಹೇಳುತ್ತಿದ್ದಾರೆ ಸೆಂಟ್ರಲ್ ಗೌರ್ನಮೆಂಟ್ ಕ್ಯಾಶ್ ಪ್ರೋಗ್ರಾಮ್‌ಗೆ ಹಣಕೊಡುತ್ತದೆ ಆದಕ್ಕೋಸ್ಕರವಾಗಿ ಸೆಂಟ್ರಲ್ ಸಹಾಯ ತೆಗೆದುಕೊಳ್ಳುವುದಕ್ಕೆ ನಮ್ಮ ಸ್ಟೇಟ್ ಗ್ಯಾರಂಟು ಬೇಕು. ವ್ಯವಸಾಯ ದಿಂದ ಉತ್ಪತ್ತಿ ಮಾಡುವುದಕ್ಕೋಸ್ಕರ ಹಣ ಬೇಕು ಎಂದು ಹೇಳಿ ಎರಡು ಮೂರು ಕಾರಣಗಳನ್ನು ಕೊಟ್ಟಿದ್ದಾರೆ. ಆದರೆ ಅವರು ಇವತ್ತು ಇಲ್ಲಿ ಇಟ್ಟಿರತಕ್ಕ ಉತ್ತರಗಳನ್ನು ನಾವು ನೋಡುವುದಾದರೆ ಯಾವ ಒಂದು ಉದ್ದೇಶ ವನ್ನು ಇಂಟ್ರಡಕ್ಟರಿ ಮೆಮೋರಾಂಡಮ್ಮಿನಲ್ಲಿ ತಿಳಿಸಿದ್ದಾರೆಯೋ ಆ ಉದ್ದೇಶ ಮತ್ತು ಅವರು ಹಣವನ್ನು ತೆಗೆದುಕೊಳ್ಳತಕ್ಕ ಕಾರಣಗಳನ್ನು ಹೋಲಿಸಿ ನೋಡಿದರೆ ಎಷ್ಟೋ ವ್ಯತ್ಯಾಸಗಳಿವೆ. ವಿಪರೀತವಾದ ವ್ಯತ್ಯಾಸ ಗಳಿವೆ ಎಂಬುದನ್ನು ನಾವು ನೋಡಬಹುದಾಗಿವೆ. ಇವತ್ತು ನಮ್ಮ ದೇಶದಲ್ಲಿ ಹಣವನ್ನು ಬಹಳ ಮಿತವ್ಯಯ ದಿಂದ ಖರ್ಚುಮಾಡಬೇಕು. ಹಣದ ಕೊರತೆ ಇದೆ, ಆಹಾರದ ಕೊರತೆ ಇದೆ. ಅದಕ್ಕೋಸ್ಕರವಾಗಿ ಎಲ್ಲಾ ತ್ಯಾಗಕ್ಕೂ ಸಿದ್ಧರಾಗಿರಬೇಕು ಎಂದು ಹೇಳುವ ಸಮಯದಲ್ಲಿ ನಮ್ಮ ಸರ್ಕಾರದವರು ಯಾವ ರೀತಿಯಲ್ಲಿ ಖರ್ಚು ಮಾಡುತ್ತಿದ್ದಾರೆ ಎನ್ನುವುದನ್ನು ಒಂದೆರಡು ಉದಾಹರಣೆಗಳ ಮುಖಾಂತರ ನೋಡಬಹುದು. ಹಾಗೆಯೇ ಉದ್ದನ್ನು ಸರ್ಕಾರದವರು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

(MR. SPEAKER)

ಈಗ ಡಿಮ್ಯಾಂಡ್ ನಂಬರ್ ಹತ್ತರಲ್ಲಿ ನೋಡುವುದಾದರೆ, ಐಟಮ್ ನಂಬರ್ ಒಂದರಲ್ಲಿ ಒಂದು ಲಕ್ಷ ರೂಪಾಯಿಗಳನ್ನು "Maintenance and repairs of furnishings of official Residences." ಎಂದು ರಾಜ್ಯಪಾಲರ ಮನೆಯ ಸೌಂದರ್ಯಕ್ಕೊಸ್ಕರ, ರಿಪೇರಿಗೋಸ್ಕರ, ಅವರು ಒಂದು ಲಕ್ಷ ರೂಪಾಯಿಯನ್ನು ಕೇಳುತ್ತಿದ್ದಾರೆ. ಇದು ಏನು ತೋರಿಸುತ್ತದೆ ಎಂದರೆ, " ಹೊಟ್ಟೆಗೆ ಗುಜಿ ಇಲ್ಲ, ಜುಟ್ಟಿಗೆ ಮಲ್ಲಿಗೆ ಹೂವು." ಎಂಬ ಗಾದೆಯಂತೆ, ಇಂದು ದೇಶದಲ್ಲಿ ಒಂದು ಕಾಸು ಕೂಡಾ ಪೋಲು ಮಾಡದೆ, ನಾವು ಶೇಖರಿಸಿ, ಇವತ್ತಿನ ಆಹಾರ ಅಭಾವದ ಪರಿಸ್ಥಿತಿಯನ್ನು ನೀಗಬೇಕು ಎನ್ನತಕ್ಕ ಕಾಲದಲ್ಲಿ ಒಂದು ಮನೆಯ ಅಲಂಕಾರಕ್ಕಾಗಿ, ಒಂದು ಲಕ್ಷ ರೂಪಾಯಿ ಬೇಕು ಎಂದು ಸರ್ಕಾರ ಯಾವ ಎದೆಗಾರಿಕೆಯಿಂದ ತಂದಿದೆ ಎಂದು ನಾನು ಇಲ್ಲಿ ಕೇಳುತ್ತೇನೆ. ನಮಗೆ ಹಣವಿಲ್ಲದೆ, ನಾಲ್ಕನೇ ಪಂಚವಾರ್ಷಿಕ ಯೋಜನೆಯನ್ನು ಜಾರಿಗೆ ತರಲು ನಮ್ಮ ಹಣಕಾಸಿನ ಪರಿಸ್ಥಿತಿ ಬಹಳ ಕೆಟ್ಟು ಹೋಗಿರುವಾಗ, ಇಂತಹ ಒಂದು ಶೃಂಗಾರಗಳಿಗೋಸ್ಕರವಾಗಿ, ಖರ್ಚು ಮಾಡುವುದಕ್ಕೆ ತಂದಂತಹ (ಡಿಮ್ಯಾಂಡ್‌ಗಳನ್ನು) ನಾವು ಯಾವ ಧೈರ್ಯದಿಂದ ಪಾಸುಮಾಡಿ ನಿಮ್ಮ ಕೈಗೆ ಹಣ ಕೊಡಬೇಕೆಂಬುದನ್ನು ಸ್ವಲ್ಪ ಯೋಚನೆ ಮಾಡಬೇಕಾಗಿದೆ.

ಇನ್ನು ಮುಂದೆ ಸ್ವಲ್ಪ ಹೋಗಿ ನೋಡಿದರೆ ನಮ್ಮ ದೇಶದಲ್ಲಿ ಹಣಕಾಸಿನ ಪರಿಸ್ಥಿತಿ ವಿಮರ್ಶೆ ಮಾಡಬೇಕಾದರೆ ಈಗ ನಮಗೆ ಬೇಕಾದುದು ಫೈನಾನ್ಸ್ ಕಮೀಷನ್. ಇವೊತ್ತು ಫೈನಾನ್ಸ್ ಅಡ್ವೈಸರ್ ನೇಮಕ ಮಾಡಿದ್ದೀರಿ. ಅವರಿಗೆ ಸಂಬಳ 2,700 ರೂಪಾಯಿ. ಅವರು ಏತಕ್ಕೋಸ್ಕರ ಬೇಕಾಗಿತ್ತು ಎಂದು ಪ್ರಶ್ನೆ ಮಾಡಬೇಕಾಗಿದೆ. ಹಣಕಾಸಿನ ಸಚಿವರು ಹೊಸದಾಗಿ ಬಂದಿರಬಹುದು. ಅವರಿಗೆ ಬುದ್ಧಿವಂತರ ನೆರವು ಸಹಾಯಬೇಕು ಎಂದರೆ, ಫೈನಾನ್ಸ್‌ನಲ್ಲಿ ಕೋಚಿಂಗ್ ಬೇಕಾದರೆ ಪಾಠ ಹೇಳಿಸಿಕೊಳ್ಳಲಿ. ಅದಕ್ಕೋಸ್ಕರ ಸರ್ಕಾರದ ದುಡ್ಡಿನಿಂದ ಮಾಹೆಯಾನ 2,700 ರೂಪಾಯಿ ಕೊಟ್ಟು ಮೈಸೂರು ದೇಶದಲ್ಲಿ ಒಂದು ಹೊಸ ಹುದ್ದೆ ನಿರ್ಮಾಣ ಮಾಡಿದ್ದಾರೆ. ಇದರ ಅವಶ್ಯಕತೆ ಏನಿತ್ತು ಎಂದು ಕೇಳುತ್ತೇನೆ. ಹಣಕಾಸಿನ ಪರಿಸ್ಥಿತಿಯನ್ನು ವಿಮರ್ಶೆ ಮಾಡಿ, ಸರ್ಕಾರಕ್ಕೆ ಸಲಹೆಯನ್ನು ಮಾಡುವುದಕ್ಕೋಸ್ಕರ ಅವರನ್ನು ಸಲಹೆಗಾರರನ್ನಾಗಿ ತಂದಿದ್ದಾರೆ ಎಂದು ಹೇಳಬಹುದು. ಈಗ ಸಲಹೆ ಬೇಕಾಗಿಲ್ಲ. ಹಣಕಾಸಿನ ಪರಿಸ್ಥಿತಿ ಕೆಟ್ಟಿದ್ದ ಪಕ್ಷದಲ್ಲಿ ಈಗ ಬೇಕಾಗಿರುವುದು ಕಮೀಷನ್ ಆಫ್ ಎನಾಕ್ವೈರಿ. ಹಣಕಾಸಿನ ವಿಷಯದಲ್ಲಿ ಆಮೂಲಾಗ್ರವಾಗಿ ಎಲ್ಲವನ್ನೂ ಚರ್ಚೆ ಮಾಡಿ ದೇಶದ ಪರಿಸ್ಥಿತಿಯನ್ನು ಚರ್ಚೆ ಮಾಡಬೇಕಾಗಿದೆಯೇ ಹೊರತು ಒಬ್ಬ ಸಲಹೆಗಾರರನ್ನು ನೇಮಕ ಮಾಡಿ ನಿಮಗೆ ಬೇಕಾದ ಹುದ್ದೆಗಳನ್ನು ಹೆಚ್ಚಿಸುವುದಕ್ಕೆ ಸಾಹಸ ಮಾಡಿರುವುದನ್ನು ನೋಡಿದರೆ ನೀವು ಏನು ಎಕಾನಮಿ ಮೆಷರ್ಸ್ ಮಾಡುತ್ತಾ ಇದ್ದೀರಿ ಎಂದು ಬಾಯಲ್ಲಿ ಹೇಳುತ್ತಾ ಇದ್ದೀರೋ, ಅದಕ್ಕೂ ಕಾರ್ಯಗತ ಮಾಡುತ್ತಾ ಇರುವ ಕಾರ್ಯಕ್ಕೂ ಅಜಗಜಾಂತರ ವ್ಯತ್ಯಾಸ ಇದ್ದು, ಜನತೆಯಲ್ಲಿ ಏನು ಸಂಶಯ ಇದೆಯೋ ಆ ಸಂಶಯಕ್ಕೆ ಬಲ ಕೊಡುತ್ತಿದ್ದೀರಿ. ಇನ್ನೂ ಮುಂದೆ ಹೋಗಿ ನೋಡುವುದಾದರೆ ಇವೊತ್ತಿನ ದಿವಸ ಹೊಸ ಡಿವಿಜನ್‌ಗಳನ್ನು ನಿರ್ಮಾಣ ಮಾಡುತ್ತಿದ್ದೀರಿ. ಎಕನಾಮಿ ಮೆಷರ್ಸ್ ತೆಗೆದುಕೊಂಡು ಆಡಳಿತದಲ್ಲಿ ಆದಷ್ಟು ಖರ್ಚನ್ನು ಕಡಿಮೆ ಮಾಡಬೇಕು ಎಂದು ಹೇಳುವ ಸರ್ಕಾರ ಹೊಸದಾಗಿ ತಾಲ್ಲೂಕನ್ನೂ ನಿರ್ಮಾಣ ಮಾಡಿದೆ. ಬಸವ ಕಲ್ಯಾಣ ಆಗಿದೆ. ಅದಕ್ಕಾಗಿ ತಾಸೀಲ್ದಾರ್ ಡೆಪ್ಯೂಟೀ ತಾಸೀಲ್ದಾರ್ ಮತ್ತು ಕಛೇರಿಗೋಸ್ಕರ 30 ಸಹಸ್ರ ರೂಪಾಯಿ ಖರ್ಚು ಮಾಡಿದ್ದಾರೆ. ಇದು ಏತಕ್ಕೆ ಬೇಕಾಗಿತ್ತು ? ಇವೊತ್ತು ಇರತಕ್ಕ ಸಣ್ಣ ಸಣ್ಣ ತಾಲ್ಲೂಕುಗಳನ್ನು ದೊಡ್ಡದು ಮಾಡಿ ದೊಡ್ಡ ದೊಡ್ಡ ಸರ್ಕಲ್ ಮಾಡಿ ಅಡ್ಮಿನಿಸ್ಟ್ರೇಷನ್ ಯೂನಿಟ್ಸ್, ಎಕಾನಮಿ ಯೂನಿಟ್ಸ್ ಮಾಡಬೇಕು ಎಂದು ಬಾಯಿನಲ್ಲಿ ಹೇಳುವವರು, ತಾವು ಮನಸ್ಸಿಯಾಗಿ, ಮನಸೋಚ್ಛೆಯಾಗಿ ನಿಮಗೆ ಬೇಕಾದ ಕಡೆ ತಾಲ್ಲೂಕು ಜಿಲ್ಲಾ ಹೆಡ್ ಕ್ವಾರ್ಟರ್ಸ್ ಮಾಡುವುದಾದರೆ, ಅದು ದುಂದುಗಾರಿಕೆ ಅಲ್ಲವೇ ಎಂದು ನನಗೆ ಸಮಂಜಸವಾದ ಉತ್ತರ ಕೊಡಬೇಕಾಗಿದೆ. ನಿಮಗೆ ಬೇಕಾದ ಕಡೆ ತಾಲ್ಲೂಕು ಕಛೇರಿಗಳನ್ನೂ ನಿಮಗೆ ಬೇಕಾದ ಕಡೆ ಜಿಲ್ಲಾ ಕಛೇರಿಗಳನ್ನೂ ಮಾಡುವುದನ್ನೂ ನೋಡಿದರೆ ಸಾರ್ವಜನಿಕ ಹಣವನ್ನು ಮನಸ್ಸಿಗೆ ಬಂದ ಹಾಗೆ ಖರ್ಚು ಮಾಡುವ ಸರ್ಕಾರದ ಪ್ರವೃತ್ತಿ ಬಹಳ ಅಪಾಯಕಾರಿಯಾದದ್ದು ಎಂದು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಸರ್ಕಾರ ಈ ವಿಚಾರದಲ್ಲಿ ಬಹಳ ಆಳವಾಗಿ ಯೋಚನೆ ಮಾಡಿ ಹೊಸ ಡಿವಿಜನ್ ಮಾಡುವ ಕಾಲದಲ್ಲಿ, ದೇಶದಲ್ಲಿ ಎಕಾನಮಿ ಯೂನಿಟ್ಸ್ ಏನು ಇದೆ ಅದನ್ನೂ ಎಲ್ಲಾ ಕಡೆಯೂ ಆಮೂಲಾಗ್ರವಾಗಿ ವಿಚಾರ ಮಾಡಿ ರಿಸೋರ್ಸಸ್ ಕಮಿಟಿ, ಎ.ಜಿ.ಆರ್. ಕಮಿಟಿ ಶಿಫಾರ್ಸ್ ಮಾಡಿರತಕ್ಕ ರೀತಿಯಲ್ಲಿ ಮಿತವ್ಯಯ ಸಾಧನೆ ಮಾಡತಕ್ಕ ತತ್ವವನ್ನು ಅಂಗೀಕರಿಸಬೇಕು ಮತ್ತು ಮನಸ್ಸಿಗೆ ಬೇಕಾದ ಕಡೆ ಹೊಸ ತಾಲ್ಲೂಕು ಮಾಡುವುದು ಬೇಡವಾದ ಕಡೆ ಬಿಟ್ಟು ಬಿಡುವುದು, ಈ ರೀತಿ ಮಾಡುವುದು ತಪ್ಪು. ಇದು ನಿಜವಾಗಿ ಈ ಕಾಲದಲ್ಲಿ ಮಾಡಬಾರದಾಗಿತ್ತು ಎಂದು ಸರ್ಕಾರಕ್ಕೆ ಹೇಳಬೇಕಾಗಿದೆ.

ಇನ್ನೂ ಮುಂದೆ ತಾವು ನೋಡಬಹುದು. ಡಿಮ್ಯಾಂಡ್ ನಂ. 15ರಲ್ಲಿ ಐಟಂ ನಂ. 1 : ಕೆಲವು ಅಧಿಕಾರಿಗಳು ಸರ್ಕಾರದವರು ತಮಗೆ ಕೊಡತಕ್ಕ ಇನ್‌ಕ್ರಿಮೆಂಟ್ ಅರಿಯರ್ಸ್‌ಗೋಸ್ಕರ ಕೋರ್ಟಿಗೆ ಹೋಗಿದ್ದಾರೆ. ಕೋರ್ಟ್ ಡಿಕ್ರಿ ಮಾಡಿ ಸರ್ಕಾರದಿಂದ 11,202 ರೂಪಾಯಿಗಳನ್ನು ಪಡೆಯಬೇಕಾಗಿ ಬಂತು. ನಿಮ್ಮಲ್ಲಿ

ದೊಡ್ಡ ದೊಡ್ಡ ಇಲಾಖೆಗಳವೆ. ದೊಡ್ಡ ದೊಡ್ಡ ಸೆಕ್ರಿಟರಿಗಳು ಇದ್ದಾರೆ. ಅಧಿಕಾರಿಗಳಿಗೆ ಆಗತಕ್ಕ ಅನ್ಯಾಯವನ್ನು ಅವರಿಗೆ ಬರಬೇಕಾದ ಬಾಕಿಯನ್ನು ತಾವು ವಿಮರ್ಶೆ ಮಾಡಿ ಕೊಡಿಸಬೇಕು. ಈ ರೀತಿ ಕೋರ್ಟು ಖರ್ಚು ಬಡ್ಡಿ ಎಲ್ಲಾ ಸೇರಿಸಿ ಕೊಡುವ ಸಂದರ್ಭಗಳು ಹಿಂದೆ ಬಂದಿಲ್ಲ. ಒಂದು ಉದಾಹರಣೆ ಹೇಳುತ್ತಾ ಇದ್ದೇನೆ. ಸರ್ಕಾರದವರು ಇಷ್ಟೊಂದು ದೊಡ್ಡ ಕಛೇರಿಯನ್ನು ಇಟ್ಟುಕೊಂಡು, ದೊಡ್ಡ ಸೆಕ್ರೆಟೇರಿಯಟ್ ಇಟ್ಟುಕೊಂಡು, ದೊಡ್ಡ ಫೈನಾನ್ಸ್ ಡಿಪಾರ್ಟ್‌ಮೆಂಟ್ ಇಟ್ಟುಕೊಂಡು ಒಬ್ಬ ಅಧಿಕಾರಿಗೆ ಆಗತಕ್ಕಂಥ ಅನ್ಯಾಯವನ್ನು ತಾವು ವಿಮರ್ಶೆ ಮಾಡಿ ಚರ್ಚೆ ಮಾಡಿ ತೀರ್ಮಾನಕ್ಕೆ ಬರುವುದಕ್ಕೆ ಅವಕಾಶವಿಲ್ಲ ಎಂದರೆ ಹೇಗೆ ? ಯಾವ ಅಧಿಕಾರಿಯೇ ಆಗಲಿ, ಅವನಿಗೆ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸಬೇಕಾದರೆ ಕೋರ್ಟಿಗೆ ಹೋಗಬೇಕು. ಕೋರ್ಟ್ ಅನ್ಯಾಯವಾಗಿದೆ ಎಂದು ಹೇಳಬೇಕಾದರೆ ಪರಿಸ್ಥಿತಿ ಯಾವ ಮಟ್ಟದಲ್ಲಿ ಇದೆ ಎನ್ನುವುದನ್ನು ಅರಿಯಬೇಕು. ಇಂತಹ ನೂರಾರು ವಿಷಯಗಳು ಸರ್ಕಾರದ ಎದುರಿನಲ್ಲಿ ಇವೆ. ಅನೇಕ ಸಣ್ಣ ಪುಟ್ಟ ನೌಕರರು ಕೋರ್ಟಿಗೆ ಹೋಗಲು ಶಕ್ತಿ ಇಲ್ಲದೇ ಇರುವವರು ಏನು ಮಾಡಬೇಕು ? ಮೊನ್ನೆ ಬಡ ಉಪಾಧ್ಯಾಯರು ಬಂದಿದ್ದರು. 736 ಜನ ಉಪಾಧ್ಯಾಯರಿಗೆ ಅನ್ಯಾಯವಾಗಿ ರಿಟೈರ್‌ಮೆಂಟ್ ಏಜ್ ಕಡಿಮೆ ಮಾಡಿ ಮನೆಗೆ ಕಳುಹಿಸಿದ್ದಾರೆ 10 ಜನ ಶಕ್ತಿ ಇದ್ದವರು ಸುಪ್ರೀಂ ಕೋರ್ಟಿಗೆ ಹೋಗಿದ್ದಾರೆ, ಅಲ್ಲಿ ಅವರಂತೆ ತೀರ್ಮಾನ ಆಗಿದೆ. ಅವನ್ನು ಇನ್ನೂ ಜಾರಿಗೆ ಕೊಟ್ಟಿಲ್ಲ. ನೌಕರರು ಕೋರ್ಟಿಗೆ ಹೋಗಿ ನ್ಯಾಯ ಪಡೆಯಬೇಕು ಎನ್ನುವ ಧೋರಣೆ ಸರಿಯಲ್ಲ. ಬಡ ಉಪಾಧ್ಯಾಯರಿಗೆ ಬಡ ಅಧಿಕಾರಿಗಳಿಗೆ ನ್ಯಾಯವಾಗಿ ಸಲ್ಲಬೇಕಾದುದ್ದನ್ನು ತಾವು ನೇರವಾಗಿ ಸಲ್ಲಿಸಿದರೆ ಅವರಿಗೆ ತಗಲುವ ಕೋರ್ಟಿನ ಖರ್ಚು ಕಡಿಮೆ ಆಗುತ್ತದೆ. ಸಲ್ಲಬೇಕಾದ ನ್ಯಾಯವನ್ನೂ ನೇರವಾಗಿ ಶೀಘ್ರವಾಗಿ ಸಲ್ಲಿಸಿದರೆ ನ್ಯಾಯಕ್ಕೆ ಬೆಲೆ ಸಿಕ್ಕುತ್ತದೆ ಎಂದು ಸರ್ಕಾರಕ್ಕೆ ಹೇಳಬೇಕಾಗಿದೆ.

ದಿಲ್ಲಿಯಲ್ಲಿ ಹೊಸದಾಗಿ ಒಂದು ಇನ್‌ಫರ್ಮೇಷನ್ ಸೆಂಟರ್ ಎಂದು ನಮ್ಮ ಸರಕಾರದವರು ಮಾಡಿದ್ದಾರೆ. ಅದಕ್ಕೆ ಸುಮಾರು 1,28,000 ರೂಪಾಯಿ ಖರ್ಚನ್ನು ಇಲ್ಲಿ ತೋರಿಸಿದ್ದಾರೆ. ಈ ವರ್ಷ ಹೊಸದಾಗಿ ದೆಲ್ಲಿಯಲ್ಲಿ ಒಂದು ಇನ್‌ಫರ್ಮೇಷನ್ ಸೆಂಟರ್ ಮಾಡಬೇಕಾದ ಅಗತ್ಯ ಏನು ಇತ್ತು ? ಒಬ್ಬ ಪಬ್ಲಿಕ್ ರಿಲೇಷನ್ ಆಫೀಸರು ಒಬ್ಬ ಇನ್‌ಫರ್ಮೇಷನ್ ಆಫೀಸರು, ಅಸಿಸ್ಟೆಂಟ್ ಇನ್‌ಫರ್‌ಮೇಷನ್ ಆಫೀಸರು ಮತ್ತು ಡೆಪ್ಯೂಟಿ ಅಕೌಂಟೆಂಟ್, ಕ್ಲಾರ್ಕ್ಸ್ ಇತ್ಯಾದಿ ಅವರಿಗೆ ಒಂದು ಸಿಬ್ಬಂದಿ ಕೊಟ್ಟಿದ್ದೀರಿ. ಈ ಒಂದು ಕಷ್ಟಕಾಲದಲ್ಲಿ ನಿಮಗೆ ದಿಲ್ಲಿ ನಗರದಲ್ಲಿ ಇಂಥ ಇನ್‌ಫರ್ಮೇಷನ್ ಸೆಂಟರನ್ನು ಮಾಡಿ ಲಕ್ಷಾಂತರ ರೂಪಾಯಿ ಖರ್ಚು ಮಾಡತಕ್ಕ ಅಗತ್ಯ ಏನು ಇತ್ತು ಎಂದು ಹಣಕಾಸಿನ ಸಚಿವರನ್ನು ಕೇಳುತ್ತೇನೆ. ಇವೊತ್ತು ನಾವು ಒಂದು ಸರಳ ಭಾಷೆಯಲ್ಲಿ ಹೇಳುವುದಾದರೆ, ಅವರದು ಒಂದು ಮೊಂಡುತನವಾಗಿದೆ. ನೀವು ಹೇಳುವುದು ಹೇಳುತ್ತಾ ಇರಿ, ಬಾರಿಸುವುದನ್ನು ಬಾರಿಸುತ್ತಾ ಇರಿ, ನಾವು ಮಾಡುವುದನ್ನು ಮಾಡೋಣ, ನಮಗೆ ಮೆಜಾರಿಟಿ ಇದೆ ಎನ್ನುವ ಭಾವನೆ ಅವರಲ್ಲಿ ಏನು ಇದೆ, ಅದು ಕೆಟ್ಟದ್ದು. ದೇಶದಲ್ಲಿ ಎಲ್ಲರೂ ಮಿತವ್ಯಯ ಸಾಧಿಸಬೇಕು. ದೇಶದಲ್ಲಿ ಕಷ್ಟ ಪರಿಸ್ಥಿತಿ ಇದೆ ಎಂದು ಹೇಳುತ್ತಿರುವಾಗ, ದಿಲ್ಲಿಯಲ್ಲಿ ಒಂದು ಇನ್‌ಫರ್ಮೇಷನ್ ಸೆಂಟರ್ ತೆರೆಯುವ ಅವಶ್ಯಕತೆ ಏನು ಇತ್ತು ? ಇವೊತ್ತು ಇನ್‌ಫರ್ಮೇಷನ್ ಡಿಪಾರ್ಟ್‌ಮೆಂಟಿನಲ್ಲಿ ಅನೇಕ ಜನಗಳಿಗೆ ಉತ್ತೇಜನ ಕೊಟ್ಟು ಹೆಚ್ಚಿನ ಕೆಲಸ ತೆಗೆದುಕೊಳ್ಳುವ ಅವಕಾಶ ಇದೆ. ನಿಮ್ಮ ಟೂರಿಸ್ಟ್ ಸೆಂಟರುಗಳು ನಮ್ಮ ಮೈಸೂರು ದೇಶವಲ್ಲಿ ಎಲ್ಲಾ ಕಡೆ ಇಲ್ಲ. ಮೈಸೂರು ದೇಶ, ಭಾರತ ಮತ್ತು ಪ್ರಪಂಚದ ಇತರ ದೇಶಗಳಿಂದ ಪ್ರವಾಸಿಗರನ್ನು ಆಕರ್ಷಣೆ ಮಾಡುವ ಇನ್‌ಫರ್ಮೇಷನ್ ಕೊಡಿ. ಎಂದರೆ ಒಂದು ಸೆಂಟರ್ ಇಲ್ಲ. ಆದರೆ ದೆಲ್ಲಿಯಲ್ಲಿ ಖಿಕೆ ಇದು ಬೇಕಾಗಿತ್ತು ? ಮೊದಲು ನಮ್ಮ ಮನೆಯನ್ನು ಸರಿಯಾಗಿಟ್ಟುಕೊಂಡು ಆಮೇಲೆ ಬೇರೆ ಕಡೆ ಹೋಗುವುದು ಬುದ್ಧಿವಂತಿಕೆಯೇ ? ಹೊರತು ಇವೊತ್ತು ಯಾರಿಗೋ ಹುದ್ದೆ ಕೊಡುವುದಕ್ಕೋಸ್ಕರ ದಿಲ್ಲಿ ನಗರದಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಸೆಂಟರ್ ಓಪನ್ ಮಾಡುವುದು ಸರಿಯಲ್ಲ. ಇಂಥಾದ್ದನ್ನು ಮಾಡಬಾರದು. ಇದರಿಂದ ಹಣಕಾಸಿನ ಒಡಿತ ಇರುವುದಕ್ಕೆ ಖಂಡಿತ ಆಗುವುದಿಲ್ಲ.

ಇದೇ ರೀತಿ ಹೇಳುತ್ತಾ ಹೋದರೆ ಅನೇಕ ಡಿಮ್ಯಾಂಡ್‌ಗಳಲ್ಲಿ ಸರ್ಕಾರದವರು ಕೆಲವು ಹುದ್ದೆಗಳನ್ನು ಕೆಲವು ಖರ್ಚುಗಳನ್ನು ಅನಾವಶ್ಯಕವಾಗಿ ಮಾಡಿಕೊಂಡು ಬರುತ್ತಿದ್ದಾರೆ, ಇವೊತ್ತಿನ ದಿವಸ ಎರಡನೆಯ ಸಪ್ಲಿಮೆಂಟರಿ ಡಿಮ್ಯಾಂಡನ್ನು ಈ ಸಭೆಯ ಮುಂದೆ ಇರತಕ್ಕ ಅವಕಾಶವನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ಇದೇ ಕೊನೆಯಲ್ಲವೆಂದು ಹೇಳುತ್ತಾ ಇದ್ದಾರೆ. ಮೂರನೆಯ ಸಪ್ಲಿಮೆಂಟರಿ ಡಿಮ್ಯಾಂಡ್ ಕೂಡಾ ತರುತ್ತೇವೆ ಎಂದು ಹೇಳುತ್ತಾರೆ. ನೈಜ ಚಿತ್ರವನ್ನು ಆಖೈರಾಗಿ ಹೇಳಲಿಲ್ಲ. ಹಣಕಾಸಿನ ಸ್ಥಿತಿ ಯಾವ ರೀತಿ ಇರುತ್ತದೆಂದು ಅಳತೆ ಮಾಡುವುದಕ್ಕೆ ಕಷ್ಟವಾಗಿದೆ. ಮೈಸೂರು ದೇಶದ ಹಣಕಾಸಿನ ಪರಿಸ್ಥಿತಿ ಬಗ್ಗೆ ಒಂದು ಸಂಶಯ ಬರತಕ್ಕ ರೀತಿಯಲ್ಲಿ ಇದೆ. ಏನು ಇವೊತ್ತು ಯಾವ ಯೋಜನೆ ಮಾಡಿದರೂ ಕೂಡ ನಮ್ಮ ಹತ್ತಿರ ದುಡ್ಡು ಇಲ್ಲ ಎಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ದಿಲ್ಲಿಗೆ ಹೋದಾಗ ಪ್ಲಾನಿಂಗ್ ಕಮಿಷನ್‌ನವರು, ಮುಂದಿನ ಯೋಜನೆ ಕಾರ್ಯಗತ ಮಾಡಬೇಕಾದರೆ ಇಷ್ಟು ದುಡ್ಡು ಕೊಡಬೇಕು, ನೀವು ಇಷ್ಟು ದುಡ್ಡು ಕೊಟ್ಟರೆ ನಾವು ಇಷ್ಟು ದುಡ್ಡು ಕೊಡುತ್ತೇವೆ, ಎಂದು ಹೇಳಿದ್ದಾರೆ. ಪ್ಲಾನಿಂಗ್ ಕಮಿಷನ್‌ನವರು ನಮಗೆ ಹಣವನ್ನು ಕೊಡಬೇಕಾದರೆ ನಿಮ್ಮ ಉತ್ಪತ್ತಿಯನ್ನು ತೋರಿಸಿ ಎಂದು ಹೇಳುತ್ತಿದ್ದಾರೆ. ಈ ವಿಚಾರಕ್ಕೆ ಎಷ್ಟು ಮಟ್ಟಿಗೆ ಉತ್ತರ ಕೊಡುತ್ತಾರೆಂದು ನೋಡಬೇಕಾಗಿದೆ. ನಮ್ಮಲ್ಲಿರುವ ಒಂದೊಂದು

(MR. SPEAKER)

ಕಾಸು, ಒಂದೊಂದು ರೂಪಾಯಿಯನ್ನು ಕೂಡ ನಾವು ಬಹಳ ಮಿತವ್ಯಯದಿಂದ ಖರ್ಚುಮಾಡಿ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಂಡು ಸರಿಯಾಗಿ ಖರ್ಚುಮಾಡುತ್ತೇವೆ ಎನ್ನುವ ನಂಬಿಕೆಯನ್ನು ಹುಟ್ಟಿಸಿದರೆ ಮಾತ್ರ ನಮ್ಮ ಹಣಕಾಸಿನ ಪರಿಸ್ಥಿತಿ ಮತ್ತು ಹಣಕಾಸಿನ ಚಿತ್ರ ಒಳ್ಳೆಯ ರೂಪವನ್ನು ತಾಳತಕ್ಕ ಅವಕಾಶವಿದೆ. ಹೀಗಿರುವಾಗ ಒಬ್ಬೊಬ್ಬ ಮಂತ್ರಿಗಳು ಬಂದಾಗಲೂ ಕೂಡ ಒಂದೊಂದು ಹೊಸ ಉದ್ಯಮವನ್ನು, ಒಂದೊಂದು ಹೊಸ ಇಲಾಖೆಯನ್ನು ತೆರೆಯುತ್ತಿದ್ದರೆ ಹಣಕಾಸಿನ ಚಿತ್ರ ಹೇಗೆ ತಾನೆ ಉತ್ತಮವಾದೀತು. ಹಣಕಾಸಿನ ಪರಿಸ್ಥಿತಿ ಸಂಕಷ್ಟದಲ್ಲಿರುವಾಗ ಇಂಥ ಕೆಲಸಕಾರ್ಯಗಳನ್ನು ಮಾಡುತ್ತ ಬಂದರೆ ಅದು ಇನ್ನಷ್ಟು ದುರ್ಭರ ಸ್ಥಿತಿಗೆ ಬರಬಹುದು ಎನ್ನುವ ಸಂಶಯ ಬರುತ್ತದೆ. ಇದನ್ನು ನಿವಾರಣೆ ಮಾಡುವುದಕ್ಕೋಸ್ಕರ ಹಣಕಾಸಿನ ಪರಿಷ್ಕರಣೆ ಡಿಮ್ಯಾಂಡನ್ನು ತಂದಿರುವ ರೀತಿಯನ್ನು ವಿರೋಧ ಮಾಡಿ, ದುಂದು ವ್ಯಯವನ್ನು ತಪ್ಪಿಸಲು ಇದನ್ನು ವಾಪಸು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

5-30 P.M.

ಶ್ರೀ ಸಂಜೀವನಾಥ ಐಕಳ (ಸುರತ್ಕಲ್).—ಮಾನ್ಯ ಸಭಾಪತಿಗಳೇ, ಆರ್ಥಿಕ ಮಂತ್ರಿಗಳು ತಂದಂಥ ಸಪ್ಲಿಮೆಂಟರಿ ಎಸ್ಟಿಮೇಟಿನಲ್ಲಿ ಕೆಲವು ಡಿಮ್ಯಾಂಡ್‌ಗಳ ಮೇಲಷ್ಟೇ ನಾನು ಮಾತನಾಡಲಿಕ್ಕೆ ಇಷ್ಟಪಡುತ್ತೇನೆ. ಮುಖ್ಯವಾಗಿ ಡಿಮಾಂಡ್ ನಂಬರ್ 10ರಲ್ಲಿ ಬಂದರು ಮತ್ತು ರೇಲ್ವೆಗಳಿಗೆ ಬೇಕಾದ ಭೂಪ್ರಭುತ್ವವನ್ನು ಸ್ವಾಧೀನ ಮಾಡಿಕೊಳ್ಳುವ ಸಲುವಾಗಿ ಹೊಸ ಆಫೀಸನ್ನು ನಿರ್ಮಾಣ ಮಾಡುವ ವಿಷಯದಲ್ಲಿ ಹಣವಿಟೆಕು ಎಂದು ನಮೂದಿಸಿದ್ದಾರೆ. ಭೂಸ್ವಾಧೀನದ ಸಂಬಂಧದಲ್ಲಿ ಆಲ್ಲಿರುವ ಅಧಿಕಾರಿಗಳಿಗೇ ಬೇಕಾಷ್ಟು ಕೆಲಸವಿಲ್ಲದೆ ಇರುವಾಗ ಅನೇಕ ಕಡೆಗಳಿಂದ ಹೊಸ ಹೊಸ ಅಧಿಕಾರಿಗಳನ್ನು ನೇಮಕ ಮಾಡಿ ಅದಕ್ಕಾಗಿ ಖರ್ಚು ಮಾಡುವ ಆವಶ್ಯಕತೆ ಇದೆಯೇ ಎಂದು ನಾನು ಪ್ರಶ್ನಿಸುತ್ತೇನೆ. ಭೂಸ್ವಾಧೀನ ಎನ್ನುವುದು ದೊಡ್ಡ ಬಾಟಲ್‌ನೆಕ್ ಆಗಿ ಪರಿಣಮಿಸಿದೆ. ನಮ್ಮ ಜಿಲ್ಲೆಯಲ್ಲಿ ಎಷ್ಟೋ ಕಡೆ ಭೂಮಿಯನ್ನು ಸ್ವಾಧೀನ ಮಾಡಿಕೊಂಡು ಐದು, ಆರು, ಎಂಟು ವರ್ಷಗಳಾಗಿದ್ದರೂ ಆಕ್ವಿಜಿಷನ್, ಫೈನಲೈಸಿಂಗ್, ಪೂರ್ತಿಯಾಗಿಲ್ಲ. ಇದರಿಂದ ಜಮೀನು ಕಳೆದುಕೊಂಡಿರುವವರಿಗೆ ಹಣ ಸಿಕ್ಕುತ್ತಿಲ್ಲ. ಕೆಲವರು ರಾಜಿಮಾಡಿಕೊಂಡು ನೆಗೋಷಿಯೇಷನ್ ಮೇಲೆ ಸ್ಥಳಗಳನ್ನು ಬಿಟ್ಟುಕೊಟ್ಟಿದ್ದಾರೆ. ಅಂಥವರಿಗೂ ಸಹ ಹಣ ಸಲ್ಲಲಿಲ್ಲ. ನಾವು ರಾಜಿಯಿಂದ ಭೂಮಿಯನ್ನು ಬಿಟ್ಟುಕೊಟ್ಟರೂ ಸರ್ಕಾರ ನಮಗೆ ಹಣ ಕೊಡುವುದಿಲ್ಲ. ಹೀಗಾದರೆ ನಾವು ಏಕೆ ರಾಜಿಯಿಂದ ಭೂಮಿಯನ್ನು ಬಿಡಬೇಕು ಎಂದು ಜನ ಹೇಳುತ್ತಾರೆ. ಆಕ್ವಿಜಿಷನ್ ನಡವಳಿಕೆಗಳು ಪೂರ್ತಿಯಾಗದೆ ಇರುವುದರಿಂದ ದೊಡ್ಡ ದೊಡ್ಡ ಸಂಕಗಳು ಆಗಿದ್ದರೂ ಅಪ್ರೋಚ್ ರೋಡ್ ಆಗಿಲ್ಲ, ಸಣ್ಣ ಪುಟ್ಟ ನೀರಾವರಿಯೋಜನೆಗಳಾಗಿದ್ದರೂ ಕಾಲುವೆಗಳು, ನಾಲಾಗಳು ಆಗಿಲ್ಲ. ಮಿಲ್ಕ್ ಡೈರಿ ಸ್ಕೀಂ ಆಗಿದೆ. ಅಲ್ಲಿಗೆ ಹೋಗಲು ಜಾಗ ಆಕ್ವೈರ್ ಆಗಿಲ್ಲ. ಈ ರೀತಿಯಾಗಿ ಸಣ್ಣಸಣ್ಣ ವಿಷಯಗಳಲ್ಲಿ ಆಕ್ವಿಜಿಷನ್ ಬಹಳ ಹಿಂದೆ ಬಿದ್ದಿದೆ. ಈ ಬಗ್ಗೆ ಒಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಮುಲ್ಕಿ ಗ್ರಾಮದಲ್ಲಿ ಜುಮ್ಮಾ ಮಸೀದಿಗೆ ದಾರಿ ಮಾಡಲು ಬೇಕಾದ .07 ಸೆಂಟ್‌ನಷ್ಟು ಜಾಗವನ್ನು ಸ್ವಾಧೀನ ಮಾಡಿಕೊಳ್ಳಲು 1958ರಲ್ಲಿ ಆಕ್ವಿಜಿಷನ್ ನಡವಳಿಕೆಗಳು ಆಗಿ ಇವತ್ತಿನವರೆಗೂ ತೀರ್ಮಾನವಾಗಿ ಹಣ ಪಾವತಿಯಾಗಿಲ್ಲ. .07 ಸೆಂಟ್ ಜಾಗ ತೆಗೆದುಕೊಳ್ಳುವುದಕ್ಕೆ ಏಳೆಂಟು ವರ್ಷವಾದರೂ ಏನು ಕೆಲಸವಾಗಿಲ್ಲ. ಆ ಸಂಬಂಧದಲ್ಲಿ ಮೇಲಕ್ಕೆ ಕಳಿಸಿಕೊಟ್ಟ ಕಾಗದಪತ್ರಗಳೇ ಕಾಣೆಯಾದುವು. ಹೊಸದಾಗಿ ಫೈಲ್ ಬಿಲ್ಡ್ ಅಪ್ ಮಾಡಿ ಕಳಿಸಿಕೊಟ್ಟರು. ಇದುವರೆಗೂ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಈ ರೀತಿ ಇರುವಾಗ ಇದ್ದ ಅಧಿಕಾರಿಗಳಿಗೇ ಕೆಲಸವಿಲ್ಲದೆ ಇರುವಾಗ ಬಂದರಿಗೋಸ್ಕರ, ರೇಲ್ವೆಗೋಸ್ಕರ ಹೊಸದಾಗಿ ಅಧಿಕಾರಿಗಳನ್ನು ನೇಮಕ ಮಾಡುವುದನ್ನು ವಿರೋಧಿಸುತ್ತೇನೆ.

ಬಂದರು ನಿರ್ಮಾಣಕ್ಕೆ ಜಾಗದ ಆವಶ್ಯಕತೆ ಇದ್ದರೂ ಅದಕ್ಕಿಂತ ಹೆಚ್ಚಿನ ಜಾಗವನ್ನು ಸ್ವಾಧೀನ ಮಾಡಿರುವ ವಿಷಯವನ್ನು ನಾವು ಹೇಳಿದ್ದೇವೆ. ಬಂದರಿನಲ್ಲಿರುವ ಸಿಬ್ಬಂದಿ ವರ್ಗಕ್ಕೆ ಬೇಕಾಗಿರುವ ಕ್ವಾರ್ಟರುಗಳಿಗಾಗಿ 84 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತ ಬಂದರೂ ಕೆಲಸ ಪ್ರಾರಂಭವಾಗಿ ಅರ್ಧಮರ್ಧ ನಡೆದಿದೆ. ಬಂದರಿಗೆ ಭೂಮಿಯನ್ನು ಸ್ವಾಧೀನ ಮಾಡಿಕೊಂಡ ಸಂಬಂಧದಲ್ಲಿ ನಿರಾಶ್ರಿತರಾದವರಿಗೆ ಹೊಸ ಜಾಗವನ್ನು ಸ್ವಾಧೀನಮಾಡಿಕೊಂಡು ಅವರನ್ನು ಪುನರ್ನಿವೇಶನಗೊಳಿಸುವ ಕೆಲಸ ಇನ್ನೂ ಆಗಿಲ್ಲ. ಆ ಕೆಲಸ ಅತೃಪ್ತಿಕರವಾಗಿ ನಡೆದಿದೆ. ಅವರನ್ನು ಪುನರ್ನಿವೇಶನಗೊಳಿಸಲು ಬೇಕಾಗಿರುವ ಐದಾರು ಎಕರೆ ಭೂಮಿಯನ್ನು ಇನ್ನೂ ಸರ್ಕಾರ ಸ್ವಾಧೀನಪಡಿಸಿಕೊಂಡಿಲ್ಲ. ಅನೇಕ ಕುಟುಂಬಗಳು ಹಾಗೆಯೇ ಇವೆ. ರೈಲ್ವೆ ಕೆಲಸಕ್ಕೆ ಅಥವಾ ಆಫೀಸಿಗೆ ಬೇಕಾದ ಜಾಗವನ್ನು ಕೆಲವು ಪ್ರಭಾವೀ ಜನರಿಗೆ ಬೇಕಾದ ಜಾಗವನ್ನು ಬೇಗ ಸ್ವಾಧೀನ ಮಾಡುತ್ತಿದ್ದಾರೆ. ಅದೇ ನಿರಾಶ್ರಿತರ ಕುಟುಂಬಗಳಿಗೆ ಪುನರ್ನಿವೇಶನಕ್ಕಾಗಿ ಜಮೀನು ಸ್ವಾಧೀನಪಡಿಸಿಕೊಳ್ಳಲು ಯಾವ ಕಾರ್ಯಕ್ರಮವನ್ನು ನಮ್ಮ ಸರ್ಕಾರದವರು ತೆಗೆದುಕೊಳ್ಳಲಿಲ್ಲ.

ಡಿಮ್ಯಾಂಡ್ ನಂ. 15ರ ವಿಚಾರದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಿದ್ದಾರೆ. ಹೈಕೋರ್ಟ್ ಆರ್ಡರ್ ಪ್ರಕಾರ ಇನ್ಸೂರೆನ್ಸ್ ಇಲಾಖೆಯ ಆರು ಜನ ಸೂಪರಿಂಟೆಂಡೆಂಟರುಗಳಿಗೆ ಪಾವತಿ ಮಾಡಲು ಹನ್ನೊಂದು ಸಾವಿರ ರೂಪಾಯಿ ಕೊಡಬೇಕು ಎಂದು ಕೇಳಿದ್ದಾರೆ. ಇದೇ ರೀತಿ ಎಷ್ಟು ಕೇಸುಗಳು ಹೈಕೋರ್ಟಿನಲ್ಲಿವೆ. ಎಷ್ಟು ರಿಟ್ ಅರ್ಜಿಗಳು ಇತ್ಯರ್ಥವಾಗದೆ ಉಳಿದಿವೆ. ಆ ಸಂಬಂಧದಲ್ಲಿ ಸರ್ಕಾರ ಕೊಡಬೇಕಾದ ಹಣವೆಷ್ಟು, ಪ್ರಮೋಷನ್ ಕೊಡುವುದರಲ್ಲಿ ನಿವೃತ್ತಿ ವೇತನವನ್ನು ಕೊಡುವದರಲ್ಲಿ ಎಷ್ಟು ಹಣ ಕೊಡಬೇಕಾಗುತ್ತದೆ ? ನಿವೃತ್ತರಾಗಿರುವ ಅಧಿಕಾರಿಗಳು ಎಷ್ಟು ಜನರಿದ್ದಾರೆ ? ಅವರಿಗೆ ಸಲ್ಲಬೇಕಾದ ಪೆನ್‌ಷನ್, ಗ್ರಾಚುಯಿಟಿ ಇವುಗಳನ್ನು ಇನ್ನೂ ಸರಿಯಾಗಿ ಕೊಡುವ ವ್ಯವಸ್ಥೆಯಾಗಿಲ್ಲ. ಸರ್ಕಾರದಲ್ಲಿ ಇಂಥ ನಿಧಾನ ಧೋರಣೆ ನಡೆಯುತ್ತಿದೆ. ಇದಲ್ಲದೆ ಈಗಾಗಲೇ ಐದು ಸಾವಿರ ಜನ ಲೋಕಲ್ ಕ್ಯಾಂಡಿಡೇಟ್ ಇದ್ದಾರೆ. ಅವರಿಗೆ ಸಂಬಂಧಪಟ್ಟ ದೊಡ್ಡ ಅಪೀಲು ಅರ್ಜಿ ಸರ್ಕಾರದ ಮುಂದೆ ಇದೆ. ಈ ಪ್ರಕರಣ 1961 ರಿಂದ ನಡೆಯುತ್ತಿದೆ. ಪಬ್ಲಿಕ್ ಸರ್ವಿಸ್ ಕಮಿಷನ್, ಸ್ಟೇಟ್ ಲೆವೆಲ್ ರಿಕ್ರೂಟ್‌ಮೆಂಟ್ ಕಮಿಟಿ ಮತ್ತು ಡಿವಿಜನ್ ಲೆವಲ್ ರಿಕ್ರೂಟ್‌ಮೆಂಟ್ ಇವು ಕೆಲವು ಹೆಸರು ಗಳನ್ನೊಳಗೊಂಡ ಪಟ್ಟಿಯನ್ನು ಪ್ರಕಟ ಮಾಡಿದುವು. ನಂತರ ಅವೆಲ್ಲ ಹೈಕೋರ್ಟ್ ಆರ್ಡರ್ ಪ್ರಕಾರ ಕೆಲಸಕ್ಕೆ ಬಾರದಂತಾದುವು. ಈಗಾಗಲೇ ಲೋಕಲ್ ಕ್ಯಾಂಡಿಡೇಟ್ ಗಳಾಗಿ ಕೊಳೆಯುತ್ತಿರುವವರಿಗೆಲ್ಲ ಖಾಯಂ ಕೆಲಸಗಾರರಿಗೆ ಸಿಕ್ಕಬೇಕಾದ ಪ್ರಮೋಷನ್ ಮತ್ತು ಇತರ ಯಾವ ಸವಲತ್ತುಗಳೂ ಸಿಕ್ಕಿಲ್ಲ. ಸರ್ಕಾರ ಇವರಿಗೆ ಸಿಕ್ಕಬೇಕಾದ ಸವಲತ್ತುಗಳೆನ್ನು ದೊರಕಿಸಿಕೊಡಬೇಕು ಎಂದು ಹೇಳುತ್ತಿದ್ದೇನೆ.

ಡೆಲ್ಲಿಯಲ್ಲಿ ನಮ್ಮ ಒಂದು ಪ್ರಾಪಗಾಂಡ ಬ್ಯಾಂಡ್ ಡಿಪಾರ್ಟ್‌ಮೆಂಟ್ ಇದೆ. ಇನ್‌ಫರ್ಮೇಷನ್ ಇಲಾಖೆಗೆ ಪ್ರಾಪಗಾಂಡ ಬ್ಯಾಂಡ್ ಅಂದರೆ ತಪ್ಪಾಗುವುದಿಲ್ಲ. ಅದು ಸರ್ಕಾರ ಮಾಡುವ ಕಾರ್ಯಕ್ರಮಕ್ಕೆ ಬೆಂಬಲ ಕೊಡಬೇಕಾದ್ದು, ಮುಖ್ಯವೇ. ಆದರೆ ಸರ್ಕಾರದ ಪ್ರತಿಷ್ಟೆಯನ್ನು ಮಾತ್ರ ಎತ್ತಿ ತೋರಿಸುತ್ತ, ಸಾಧಿಸದೆ ಇರುವುದನ್ನೆಲ್ಲ ಸಾಧಿಸಿದ್ದೇವೆ ಎಂದು ಹೇಳುತ್ತ ಇರುವಂಥ ಇಲಾಖೆ ಏಕೆ ಬೇಕು ? ಡೆಲ್ಲಿಯಲ್ಲಿ ಸರ್ಕಾರದವರು ಈಗ ಇನ್‌ಫರ್‌ಮೇಷನ್ ಸೆಂಟರ್ ಎಂದು ಏನು ತೆರೆದಿದ್ದಾರೆ ಅದು ತೀರ ಅಸಮಂಜಸವಾದುದು ಮತ್ತು ನಮ್ಮ ಆರ್ಥಿಕ ಖರ್ಚು ಕಡಮೆ ಮಾಡಬೇಕೆನ್ನುವ ಧೋರಣೆಗೆ ವಿರುದ್ಧವಾದುದು ಎಂದು ಹೇಳುತ್ತೇನೆ.

ಇಪ್ಪತ್ತೈದು ಲಕ್ಷ ಹೊಸ ಗೋಣಿ ಚೀಲಗಳನ್ನು ಕೊಂಡುಕೊಳ್ಳಲು 50 ಲಕ್ಷ ರೂಪಾಯಿಗಳನ್ನು ಸರ್ಕಾರ ಖರ್ಚುಮಾಡಿದೆ. ಹತ್ತು, ಹನ್ನೆರಡಾಣೆ ಆಥವಾ ಒಂದು ರೂಪಾಯಿಗೆ ಒಂದು ಗೋಣಿ ಚೀಲ ಸಿಕ್ಕುತ್ತದೆ. ಹೀಗಿರುವಾಗ ಒಂದು ಗೋಣಿಗೆ ಎರಡು ರೂಪಾಯಿನಂತೆ ಖರ್ಚು ಮಾಡುವುದು ನಮ್ಮ ಸರ್ಕಾರದ ಧೋರಣೆಯಾಗಿದೆ ಎಂದು ನಾನು ತಿಳಿಯುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಹನ್ನೆರಡಾಣೆಗೆ ಒಂದು ಗೋಣಿ ಚೀಲದಂತೆ ಸಪ್ಲೈ ಮಾಡುತ್ತಾರೆಯೇ ?

ಶ್ರೀ ಸಂಜೀವನಾಥ ಐಕಳ.—ನಾನು ಗೋಧಿ ವ್ಯಾಪಾರ ಮಾಡೋಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ಒಂದು ಚೀಲಕ್ಕೆ ಒಂದೂಕಾಲು ರೂಪಾಯಿ ಬರುತ್ತದೆ. ನೀವೇ ಸಪ್ಲೈತ ಮಾಡಬಹುದು.

ಶ್ರೀ ಸಂಜೀವನಾಥ ಐಕಳ.—ಗೋಣಿ ವ್ಯಾಪಾರದಲ್ಲಿಯೇ ಸರ್ಕಾರದ ನೀತಿ ಹೀಗಾದರೆ.....

MR. SPEAKER.—Has the Hon'ble Member ascertained the market rates ?

SRI SANJEEVANATH AIKALA.—They are within a rupee.

ಶ್ರೀ ಎಸ್. ನಿಜಲಿಂಗಪ್ಪ.—ಹಾಗಾದರೆ ಅವರೇ ಟೆಂಡರ್ ಹಾಕಿ ಗೋಣಿಚೀಲಗಳನ್ನು ಸಪ್ಲೈ ಮಾಡಬಹುದು.

SRI SANJEEVANATH AIKALA.—I am not a contractor to supply gunny bags. I have not come here to put my tender. I am not doing that.

MR. SPEAKER.—Old gunny bags may be available.

ಶ್ರೀ ಸಂಜೀವನಾಥ ಐಕಳ.—ಇನ್ನು 23ನೆಯ ಡಿಮ್ಯಾಂಡಿನಲ್ಲಿ ಇನ್‌ಟೆನ್ಸಿವ್ ರೈಸ್ ಕಲ್ಟಿವೇಷನ್ನಿಗಾಗಿ ಕೆಲವು ಆಫೀಸರುಗಳನ್ನು ನೇಮಕಮಾಡಬೇಕಾಗಿದೆ ಎಂದು ತಿಳಿಸಿದ್ದಾರೆ. ನಮ್ಮ ಜಿಲ್ಲೆಯಲ್ಲೂ ಈ ಕೆಲಸ ಆಗಬೇಕಾಗಿದೆ. ಆದರೆ ಅಲ್ಲಿ ಸಂಬಂಧಪಟ್ಟ ಆಫೀಸರುಗಳ ನೇಮಕವಾಗದಿರುವುದರಿಂದ ಆಗಬೇಕಾದ ಕೆಲಸ

(ಶ್ರೀ ಸಂಜೀವನಾಥ ಐಕಳ)

ಬಹಳ ಹಿಂದುಳಿದಿದೆ. ಸರಕಾರ ಹೈಕೋರ್ಟ್ ಆರ್ಡರಿನ ನಂತರ ಆಫೀಸರುಗಳನ್ನು ನೇಮಿಸಿದ್ದಾರೆಂದು ನಾನು ತಿಳಿಯುತ್ತೇನೆ. ನಮ್ಮಲ್ಲಿ ಬೇಕಾದ ಗ್ರಾಮಸೇವಕರನ್ನು ನೇಮಕಮಾಡಿಲ್ಲ, ಆದುದರಿಂದ ಎಷ್ಟು ತೀವ್ರವಾಗಿ ಕೆಲಸ ನಡೆಯಬೇಕೆಂಬ ಆಸೆ ಇತ್ತೋ ಅದು ನೆರವೇರಲು ಸಾಧ್ಯವಾಗಿಲ್ಲ.

ಜನರಲ್ ಅಡ್ಮಿನಿಸ್ಟ್ರೇಷನ್ ವಿಷಯ ಸ್ವಲ್ಪ ಹೇಳಬೇಕಾಗಿದೆ. ಅಧಿಕಾರಿಗಳಲ್ಲಿ ಅತೃಪ್ತಿ ಇದೆ. ಯಾವ ಕೆಲಸವಾಗಬೇಕಾದರೂ ಅಧಿಕಾರಿಗಳು ತೃಪ್ತರಾಗಿರಬೇಕು. ಹಾಗೆ ಇರುವಂತೆ ವ್ಯವಸ್ಥೆ ಮಾಡುವವರೆಗೂ ಸರಕಾರದ ಕೆಲಸ ತೃಪ್ತಿಕರವಾಗಿ ನಡೆಯಲು ಸಾಧ್ಯವಿಲ್ಲ. ಆದುದರಿಂದ ಸೀನಿಯಾರಿಟಿ ಪಟ್ಟಿ, ಪ್ರಮೋಷನ್ ವೇತನ ಮುಂತಾದುವುಗಳ ವಿಚಾರದಲ್ಲಿರುವ ನ್ಯೂನತೆಗಳನ್ನು ಸರಕಾರ ಬೇಗನೆ ಸರಿಪಡಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ನಾನು ಈ ಸಪ್ಲಿಮೆಂಟರಿ ಡಿಮ್ಯಾಂಡುಗಳನ್ನು ವಿರೋಧಿಸುತ್ತೇನೆ. ಈಗ ಫೆಬ್ರುವರಿ ನಾಲ್ಕನೆಯ ತಾರೀಖು, ಹಣ ಕೇಳುತ್ತಿದ್ದಾರೆ. ಸಾಧಾರಣವಾಗಿ ಮಾರ್ಚಿ 31ನೆಯ ತಾರೀಖು ಎಷ್ಟೋ ಹಣ ಸರೆಂಡರ್ ಮಾಡುತ್ತಾರೆ. ಹಣ ಕೇಳಿ ಒಪ್ಪಿಗೆ ಪಡೆದು ಕೊನೆಗೆ ಖರ್ಚುಮಾಡದೆ ಉಳಿಸುತ್ತಾರೆ, ನಮ್ಮ ಕೈಗೆ ಕೊಟ್ಟಿರುವ ಆಡಿಟ್ ವರದಿ, ಅಪ್ರೋಪ್ರಿಯೇಷನ್ ಅಕೌಂಟ್ಸ್, ಮುಂತಾದ್ದನ್ನು ನೋಡಿದರೆ ಕೋಟಿಗಟ್ಟಲೆ ಹಣ ಪ್ರತಿ ವರ್ಷ ಖರ್ಚುಮಾಡುವುದಕ್ಕಾಗದೆ ಉಳಿದು ಸಪ್ಲಿಮೆಂಟರಿ ಗ್ರಾಂಟನ್ನು ಕೇಳುವಾಗ ಈ ಸಭೆಯಲ್ಲಿ ಇಲ್ಲಸಲ್ಲದ ಟೀಕೆಗೆ ಗುರಿಯಾಗಬೇಕಾಗುತ್ತದೆ. ಇದಕ್ಕೆ ಕಾರಣ ಅಧಿಕಾರಿಗಳು ಹೇಳುವುದನ್ನು ಕೇಳಿ ಅದರಂತೆ ನಡೆಯುವುದೆಂದು ಕಾಣುತ್ತದೆ. ಅವರು ಹೇಳಿದಂತೆಯೇ ಮಾಡದೆ ಅವರ ಬುದ್ಧಿವಾದವನ್ನು ತೆಗೆದುಕೊಂಡು ಸ್ವಲ್ಪ ಯೋಚನೆಮಾಡಿ ಒಂದು ನಿರ್ಧಾರಕ್ಕೆ ಬರಬೇಕೆಂದು ನಾನು ಹೇಳುತ್ತೇನೆ. ಅನೇಕ ಸಲ ಸರೆಂಡರ್ ಮಾಡುವ ಹಣವನ್ನು ಬೇರೆ ಇಲಾಖೆಗಳಿಗೆ ಖರ್ಚುಮಾಡಲು ಸಾಧ್ಯವಿಲ್ಲ. ಸರಕಾರ ಯಾವುದಕ್ಕೆ ಎಷ್ಟು ಖರ್ಚು ಮಾಡಬೇಕೆಂಬುದನ್ನು ಸರಿಯಾಗಿ ವಿಚಾರಮಾಡಿ ನೋಡಬೇಕು. ಅಧಿಕಾರಿಗಳಿಗೆ ಅರಿವಿಲ್ಲದೆ ಎಷ್ಟೇ ಖರ್ಚುಮಾಡಿದರೂ ದೇಶದ ಕಲ್ಯಾಣವಾಗುವುದಿಲ್ಲ. ಈ ದಿವಸ 3,25,33,100 ರೂಪಾಯಿಗಳನ್ನು ಕೇಳುತ್ತಿದ್ದೀರಿ, ಅದು ಸರಿಯಾಗಿ ವಿನಿಯೋಗವಾಗುತ್ತದೆಯೇ ಎಂಬ ಅನುಮಾನವಿದೆ. ರೈತರಮೇಲೆ ಲ್ಯಾಂಡ್ ರೆವೆನ್ಯೂ ಸರ್ಚಾರ್ಜ್ ಹಾಕುತ್ತಿದ್ದೀರಿ. ಹಣ ಖರ್ಚುಮಾಡುವಾಗ ಎಷ್ಟು ಉಳಿಸಬೇಕು ಎಂದು ಯೋಚನೆ ಮಾಡದೆ ಖರ್ಚು ಮಾಡುತ್ತಿದ್ದರೆ, ಏಕೆ ಹಣ ಕೊಡಬೇಕು ? ಈ ದಿವಸ ಕೇಳುವ ಮೂರೂಕಾಲು ಕೋಟಿ ರೂಪಾಯಿಗಳಲ್ಲಿ 45 ಲಕ್ಷ ಮಾತ್ರ ಆಹಾರಕ್ಕಾಗಿ ಖರ್ಚು ಮಾಡುತ್ತಿದ್ದಾರೆ. ಅದೊಂದನ್ನು ಬಿಟ್ಟರೆ ಖರ್ಚುಮಾಡುವ ಉಳಿದ ಹಣ ನಿರರ್ಥಕ. ಹಾಗೆ ಖರ್ಚು ಮಾಡದಿದ್ದರೆ ಆಕಾಶ ಕೆಳಕ್ಕೆ ಬರುತ್ತಿರಲಿಲ್ಲ.

ರಾಜ್ಯಪಾರಲ ಮನೆ ಶೃಂಗಾರಕ್ಕಾಗಿ ಒಂದು ಲಕ್ಷ ಖರ್ಚು ಮಾಡುವುದು ಹೀಗೆ ಹಣದ ಅತಿವ್ಯಯ ಆಗಿರುವಾಗ ಸೆಕ್ಯೂರ್ಡ್ ಮತ್ತು ಅನ್‌ಸೆಕ್ಯೂರ್ಡ್ ಹಣ 30 ಕೋಟಿ ಇರುವಾಗ, 315 ಕೋಟಿ ಸಾಲವಿರುವಾಗ ಈ ದಿವಸ 2,700 ರೂಪಾಯಿಗಳನ್ನು ಕೊಟ್ಟು ಫೈನಾನ್‌ಷಿಯಲ್ ಅಡ್ವೈಜರ್ ನೇಮಕಮಾಡಿ ಹಣ ಯಾವ ರೀತಿ ಉಳಿಸಬೇಕು, ಯಾವ ರೀತಿ ಉಪಯೋಗಿಸಬೇಕು, ಯಾವ ರೀತಿ ರಿಸೋರ್ಸಸ್ ಕಂಡುಹಿಡಿಯಬಹುದು ಎಂಬ ಬಗ್ಗೆ ಸಲಹೆಮಾಡಬೇಕೆಂದು ಸೂಚಿಸಿದ್ದಾರೆ. ಇದಕ್ಕೆ ಮೊದಲು ಎ. ಜಿ. ರಾಮಚಂದ್ರರಾಯರ ನೇತೃತ್ವದಲ್ಲಿ ನೇಮಕವಾಗಿದ್ದ ಕಮಿಟಿಯವರು ಒಂದು ದೊಡ್ಡ ವರದಿಯನ್ನು ಸಲ್ಲಿಸಿ ಖರ್ಚು ಎಷ್ಟು ಕಡಮೆಮಾಡಬಹುದು, ಯಾವ ಅಧಿಕಾರಿಗಳನ್ನು ತೆಗೆಯಬಹುದು ಎಂಬುದನ್ನು ಸಲಹೆ ಮಾಡಿದಾಗ ಅದನ್ನು ಕಾರ್ಯರೂಪಕ್ಕೆ ತರದೆ ಇರುವ ಸರಕಾರ ಇದಕ್ಕೇಕೆ ಬೇರೆ ಒಬ್ಬ ಅಧಿಕಾರಿಯನ್ನು ನೇಮಿಸಬೇಕು ? ರಾಗಿ, ಭತ್ತ ಬೆಳೆಯುವವನಿಗೆ ತಿಂಗಳಿಗೆ 200 ರೂಪಾಯಿ ಕೊಟ್ಟರೆ 25 ಪಲ್ಲ ಬೆಳೆಯುತ್ತಾನೆ. ಅದು ಬಿಟ್ಟು ಈಗ ಹಣ ಖರ್ಚು ಮಾಡುವ ರೀತಿ ನ್ಯಾಯವಾಮದಲ್ಲ ಎಂಬುದನ್ನು ಕೂಲಂಕಷವಾಗಿ ಯೋಚನೆ ಮಾಡಬೇಕು. ಸರಕಾರದ ಕೈಲಿರುವ ವರದಿಯನ್ನೇ ಕಾರ್ಯಗತ ಮಾಡದಿರುವವರು ಏನುತಾನೆ ಮಾಡುತ್ತಾರೆ ಅನಿಸುತ್ತದೆ. ಆರೂವರೆ ಕೋಟಿ ಉಳಿಸುವುದಾಗಿ ಹಣಕಾಸಿನ ಸಚಿವರು ಪತ್ರಿಕಾ ವರದಿಗಾರರಿಗೆ ತಿಳಿಸಿದರು. ಆದರೆ ಈ ದಿವಸ ಬೇಡದಿರುವ ಕೆಲಸಗಳಿಗೆ ಲಕ್ಷಾಂತರ ರೂಪಾಯಿ ಖರ್ಚುಮಾಡುತ್ತಿದ್ದಾರೆ, ಇದು ಸರಿಯಲ್ಲ. ಹಣಕಾಸಿನ ಇಲಾಖೆಗೆ ನೇಮಕಮಾಡಿಕೊಂಡಿರುವ ಫೈನಾನ್‌ಷಿಯೆಲ್ ಅಡ್ವೈಜರು ಈಗ ನಮಗೆ ಬೇಕಾಗಿಲ್ಲ, ಅವರು ಮಾಡುವ ಕೆಲಸವನ್ನು ಇತರ ಅಧಿಕಾರಿಗಳೇನಿದ್ದಾರೆ ಅವರೇ ಮಾಡಬಲ್ಲರು. 1957ರಿಂದ 1966ರವರೆಗೆ ನಾಲ್ಕುಸಲ ಕಂಟಿನ್‌ಜನ್ಸಿ ಬಿಲ್ಲನ್ನು ತಿದ್ದುಪಡಿ ಮಾಡಿದ್ದೀರಿ. 2—3 ಕೋಟಿ ಇದ್ದುದನ್ನು 4 ಕೋಟಿಗೆ ಬೆಳೆಸಿ ಕಂಟಿನ್‌ಜನ್ಸಿ ಫಂಡು ಬೇಕಾದಾಗ ಇಲ್ಲದಿರುವಂತೆ ಉಪಯೋಗಿಸಿಬಿಡುತ್ತಾರೆ. ಹೀಗಾಗಿ ಸರಿಯಾದ ಕ್ಲೈಂ ಬಂದಾಗ ಅದಕ್ಕೆ ಉಪಯೋಗಿಸಲು ಮೀಸಲಾಗಿಟ್ಟಿರುವುದಿಲ್ಲ. ಇದು ನನ್ನ ಅನುಭವ.

ಡಿಮ್ಯಾಂಡ್ ನಂಬರ್ 27ರಲ್ಲಿ ನ್ಯೂ ಸರ್ವೀಸ್ ಅಂತ ಹೇಳಿ ಗೋವದಲ್ಲಿ ಟೂರಿಸ್ಟ್ ಬ್ಯೂರೋ ತೆರೆಯುವುದಕ್ಕಾಗಿ 18,300 ರೂಪಾಯಿಗಳನ್ನು ಖರ್ಚು ಮಾಡಲು ಹಣ ಬೇಕಾಯಿತೆಂದು ಹೇಳುತ್ತಾ ಇದ್ದೀರಿ.

ಗೋವಾ ನಮ್ಮ ಸಂಸ್ಥಾನದಲ್ಲಿ ಮರ್ಜ್ ಆಗಿಲ್ಲ. ಇನ್ನೂ ಹತ್ತು ವರ್ಷಗಳವರೆಗೂ ಅದರ ವಿಷಯದಲ್ಲಿ ಕೈ ಹಾಕಬಾರದು ಎಂದು ಹೇಳಿ ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರದವರಿಗೆ ದಿಟ್ಟತನದಿಂದ ಹೇಳಿದ್ದಾರೆ. ಹಾಗಿರುವಾಗ ಈ ಆಫೀಸನ್ನು ಅಲ್ಲಿ ತೆಗೆಯದೇ ಇದ್ದಿದ್ದರೆ ಯಾವ ಅನಾಹುತವೂ ಆಗುತ್ತಾ ಇರಲಿಲ್ಲ ಮತ್ತು ಇದನ್ನು ತೆಗೆದವಾತ್ಸಕ್ಕೆ ನಮಗೆ ಗೋವ ಸೇರುವುದೂ ಇಲ್ಲ. ಒಟ್ಟಿನಲ್ಲಿ ಮ್ಯಾನೇಜ್‌ಮೆಂಟ್, ಎಸ್ಟ್ಯಾಬ್ಲಿಷ್‌ಮೆಂಟು ಇವುಗಳಿಗೆಲ್ಲಾ ದುಡ್ಡು ಖರ್ಚಾಗುವುದಕ್ಕೆ ಈ ರೀತಿ ಮಾಡುತ್ತಾ ಹೋಗುವುದು ಸರಿಯಲ್ಲ. ನಾನು ತಿಳಿದುಕೊಂಡಿರುವ ಪ್ರಕಾರ ಕಾಂಗ್ರೆಸ್ ಲೆಜಿಸ್‌ಲೇಚರ್ ಪಾರ್ಟಿಯಲ್ಲಿ ಮೂರುವರ್ಷದ ಕೆಳಗೆ ಯಾವ ಹೊಸ ರಸ್ತೆಯನ್ನೂ ಮಾಡಬಾರದು, ಹೊಸ ಸೇತುವೆಯನ್ನೂ ಕಟ್ಟಬಾರದು, ಯಾವ ದೊಡ್ಡ ದೊಡ್ಡ ಬಂಗಲೆಗಳಿಗೂ ಹಣಖರ್ಚು ಮಾಡಬಾರದು ಎಂದು ಹೇಳಿ ಅವರು ತೀರ್ಮಾನ ಮಾಡಿದ್ದರು ಎಂದು ಹೇಳಿ ನನಗೆ ನಂಬಲರ್ಹವಾದ ಕಡೆಯಿಂದ ತಿಳಿದು ಬಂದಿತ್ತು. ಡಿಮ್ಯಾಂಡ್ ನಂಬರ್ 31ರಲ್ಲಿ ಇಡಿಯೂ ಸರ್ಕಾರದವರು ಪರವಾನಗಿ ಕೊಟ್ಟಿದ್ದಾರೆ ಎಂದುಹೇಳಿ 27,75,700 ರೂಪಾಯಿಗಳನ್ನು ಖರ್ಚುಮಾಡಿ 6 ಸೇತುವೆಗಳನ್ನು ಕಟ್ಟಬೇಕೆಂದು ಮಾಡಿದ್ದೀರಿ. ಆ ಸೇತುವೆಗಳೆಲ್ಲವೂ ಕೂಡ ಹೈದರಾಬಾದ್ ಪ್ರದೇಶದಲ್ಲಿ ಕಟ್ಟಲ್ಪಡುತ್ತಾ ಇವೆ. ಹಿಂದೆ ತಾವು ಯಾವ ಒಂದು ತತ್ವವನ್ನು ಅನುಸರಿಸಬೇಕೆಂದು ಒಪ್ಪಿಕೊಂಡಿದ್ದಿರೋ ಅದಕ್ಕೆ ತದ್ವಿರುದ್ಧವಾಗಿ ಕೇಂದ್ರ ಸರ್ಕಾರದವರು ಪರವಾನಗಿ ಕೊಟ್ಟಿದ್ದಾರೆ ಎಂದು ಹೇಳಿ ಹಣವನ್ನು ಖರ್ಚು ಮಾಡುವುದು ಇವಲ್ಲಿಯ ನ್ಯಾಯ ಎಂದು ನಾನು ತಮ್ಮನ್ನು ಪ್ರಶ್ನೆ ಮಾಡುತ್ತೇನೆ. ಈ ರೀತಿ ಮಾಡಬಾರದು ಈಗಲಾದರೂ ಹೀಗೆ ಮಾಡುವುದನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ.

ಡಿಮ್ಯಾಂಡ್ ನಂಬರ್ 53ರಲ್ಲಿ ಮಾತನಾಡುತ್ತಾ ನಮ್ಮ ಮಾನ್ಯ ಸ್ನೇಹಿತರು ಹೇಳಿದ್ದಾರೆ, ಯುದ್ಧ ಪ್ರಾರಂಭವಾದಮೇಲೆ ಗೋಣಿಚೀಲಗಳು ಎಲ್ಲಿಂದ ಬರಬೇಕಾಗಿತ್ತೋ ಅಲ್ಲಿಂದ ಬರದೇ ಇವತ್ತು ಅವುಗಳ ಬೆಲೆ ಜಾಸ್ತಿಯಾಗಿದೆ. ಆಹಾರ ಪದಾರ್ಥಗಳ ಮನಾಪಲಿ ಪ್ರೊಕ್ಯೂರ್‌ಮೆಂಟ್ ಮಾಡುತ್ತೇವೆ ಎಂದು ಅವರು ಒಂದು ತೀರ್ಮಾನವನ್ನು ತೆಗೆದುಕೊಂಡಿರುವಾಗ ಗೋಣಿಚೀಲಗಳಿಗೆ ಬೆಲೆ ಜಾಸ್ತಿಯಾಗಿರುವಾಗ ಇದನ್ನು ಖರ್ಚು ಮಾಡಿರುವುದು ತಪ್ಪು ಎಂದು ನಾನು ಹೇಳುವುದಿಲ್ಲ.

ಐದು ವರ್ಷಗಳಿಂದ ಮಾನ್ಯ ಮುಖ್ಯ ಮಂತ್ರಿಗಳು ಯಾರಿಗೂ ನಾವು ಹಣ ಅಡ್ವಾನ್ಸ್ ಮಾಡುವುದಿಲ್ಲ ಎಂದು ಹೇಳುತ್ತಾ ಬಂದಿದ್ದಾರೆ. ಡಿಮ್ಯಾಂಡ್ ನಂಬರ್ 54ರಲ್ಲಿ ಮೆಸರ್ಸ್ ನೆಚ್ಚು ಪಾದಂ ಕನ್‌ಸ್ಟ್ರಕ್ಷನ್ಸ್, ಕಂಟ್ರಾಕ್ಟರ್ಸ್ ಅವರಿಗೆ ಆರೂವರೆ ಲಕ್ಷ ರೂಪಾಯಿಗಳ ಅಡ್ವಾನ್ಸ್ ಕೊಟ್ಟಿದ್ದೀರಿ. ಶರಾವತಿ ಕಟ್ಟುವಾಗ ಆಲ್ಲಿ ಕಂಟ್ರಾಕ್ಟರುಗಳಿಗೆ ಹಣ ಅಡ್ವಾನ್ಸ್ ಮಾಡಿದಾಗ ಆಲ್ಲಿ ಎಷ್ಟುಮಟ್ಟಿಗೆ, ಹೇಗೆ ಹೇಗೆ ಮಾಡಿದರು ಸರ್ಕಾರದವರನ್ನು ಎಂತಹ ಪೇಚಿಗೆ ಸಿಕ್ಕಿ ಹಾಕಿದರು ಎಂಬುದು ತಮಗೆ ಗೊತ್ತಿದೆ. ಇನ್ನು ಮುಂದಾದರೂ ಸರ್ಕಾರದವರು ಅವರ ಕೈಯಲ್ಲಿ ಸಿಕ್ಕುಹಾಕಿಕೊಳ್ಳುವುದು ಬೇಡ. ಭಾರಿ ಭಾರಿ ಪ್ರಾಜೆಕ್ಟುಗಳನ್ನು ಮಾಡುವಾಗ ಅವ್ಯವಗಳನ್ನು ಮಾಡತಕ್ಕ ಕ್ಯಾಪ್ಯಾಸಿಟಿ ಇಲ್ಲದೆ ಈ ರೀತಿ ಸರ್ಕಾರದವರನ್ನು ಲಕ್ಷಾಂತರ ರೂಪಾಯಿ ಹಣಕೊಡಿ ಎಂದು ಕೇಳುವುದು ಸರಿಯಲ್ಲ. ಈಗಲಾದರೂ ದೊಡ್ಡ ದೊಡ್ಡ ಬಂಡವಾಳಶಾಹಿ ಕಂಟ್ರ್ಯಾಕ್ಟ್‌ರುಗಳಿಗೆ ಸರ್ಕಾರದ ಬೊಕ್ಕಸದಿಂದ ಹಣ ಕೊಟ್ಟು ಬಾವಿ ತೆಗೆಸಲು ಹಣಕೊಡಿ ಎಂದರೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿಗೆ ಹೋಗಿ, ಅಲ್ಲಿಂದ ಹಣ ಪಡೆದು ಬಾವಿ ತೆಗೆದು ಹೆಚ್ಚು ಆಹಾರ ಬೆಳೆಯಿರಿ ಎಂದು ಹೇಳುವುದನ್ನು ನಿಲ್ಲಿಸುವೇಕೆಂದು ಹೇಳುತ್ತೇನೆ. ಆಹಾರ ಬೆಳೆಯತಕ್ಕ ರೈತನ ಸಲುವಾಗಿ ಇವತ್ತು 4 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಅವರು ಮನಃಪೂರ್ವಕವಾಗಿ ಹೆಚ್ಚು ಆಹಾರವನ್ನು ಬೆಳೆಯುತ್ತಾರೆ. ಆದ್ದರಿಂದ ಸರ್ಕಾರದವರು ಇನ್ನು ಮುಂದಾದರೂ ನಿರೀಕ್ಷಿಸಿದಷ್ಟು ಫಲ ಯಾವುದು ಕೊಡುತ್ತದೆಯೋ ಅಂಥಾದ್ದಕ್ಕೆ ಹಣ ಖರ್ಚು ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಸ್ವಾಮಿ, ಈಗ ಸಭೆಯ ಮುಂದೆ ಇಟ್ಟಿರುವ ಹೆಚ್ಚುವರಿ ಬೇಡಿಕೆಗಳ ಬಗ್ಗೆ ನನ್ನ ವಿರೋಧವನ್ನು ವ್ಯಕ್ತಪಡಿಸುತ್ತೇನೆ. ಈಗ ತಂದಿರತಕ್ಕ ಹೆಚ್ಚುವರಿ ಬೇಡಿಕೆಗಳ ಪಟ್ಟಿಯನ್ನು ಪೂರ್ಣವಾಗಿ ನೋಡಿದರೆ ಇದರಲ್ಲಿ ಎಷ್ಟು ಉತ್ಪಾದನಾ ಕಾರ್ಯಗಳಿಗೆ ಹಣವನ್ನು ಖರ್ಚು ಮಾಡಿದ್ದೀರಿ ಎಂಬುದನ್ನು ಹಣಕಾಸಿನ ಸಚಿವರು ತಮ್ಮ ಉತ್ತರದಲ್ಲಿ ಈ ಮಾನ್ಯ ಸಭೆಗೆ ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇದನ್ನು ನೋಡಿದರೆ ಒಂದಲ್ಲ ಒಂದು ರೀತಿಯಲ್ಲಿ ಅಧಿಕಾರವರ್ಗವನ್ನು ನಿರ್ಮಾಣ ಮಾಡತಕ್ಕ ಹವ್ಯಾಸವಲ್ಲಿ ತಮ್ಮ ಆಸಕ್ತಿಯನ್ನು ತೋರಿಸಿದ್ದೀರಿ. ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ದಿವಸ ಸುಮಾರು ಒಂದು ಲಕ್ಷ ರೂಪಾಯಿಗಳ ಹಣವನ್ನು ಖರ್ಚುಮಾಡಿ ಎಕಾನಮಿ ರಿಸೋರ್ಸ್ ಕಮಿಟಿಯವರು ಒಂದು ವರದಿಯನ್ನು ಈ ಸಭೆಯ ಮುಂದೆ ಇಟ್ಟಿರಿ. ಆ ರಿಪೋರ್ಟಿನಲ್ಲಿರತಕ್ಕ ಒಂದು ಪದವನ್ನು ಹೇಳುವುದಾದರೆ ಕೋ-ಆಪರೇಟೀವ್ ಇಲಾಖೆಯಲ್ಲಾಗಲಿ, ವ್ಯವಸಾಯದ ಇಲಾಖೆಯಲ್ಲಾಗಲಿ ಅಥವಾ ಇನ್ನಾವುದೇ ಇಲಾಖೆಯಲ್ಲಾಗಲಿ ಯಾವ ಅಧಿಕಾರಿಗಳ ಸಂಖೆಯನ್ನೂ ಕಡಿಮೆಮಾಡದೆ ಹಾಗೆಯೇ ಇಟ್ಟಿದ್ದೀರಿ ಏಕೆ ಈ ಬಗ್ಗೆ ಗಮನವನ್ನು ಹರಿಸಲಿಲ್ಲ ಎಂದು ಕೇಳುತ್ತೇನೆ. ಶ್ರೀಮಾನ್ ಮುಕ್ಕಣ್ಣಪ್ಪನವರು ಮತ್ತು ಶ್ರೀ ಶಿವಪ್ಪನವರು ಮಾತನಾಡುವ ಕಾಲದಲ್ಲಿ ಗೋವಾದಲ್ಲಿ ಮತ್ತು ದೆಹಲಿಯಲ್ಲಿ ಪಬ್ಲಿಸಿಟಿ ಇನ್‌ಫರ್ಮೇಷನ್ ಆಫೀಸನ್ನು ತೆಗೆದಿದ್ದರ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸಿದರು, ಎಕಾನಮಿ ರಿಸೋರ್ಸ್

(ಶ್ರೀ ಎಚ್. ಡಿ. ದೇವೇಗೌಡ)

ಕಮಿಟಿ ರಿಪೋರ್ಟಿನಲ್ಲಿ ಈಗಿರತಕ್ಕ ಇನ್‌ಫರ್‌ಮೇಷನ್ ಡಿಪಾರ್ಟ್‌ಮೆಂಟಿನ ಅಧಿಕಾರಿಗಳನ್ನೇ ಕಿತ್ತು ಹಾಕಬೇಕು ಎಂದು ಸಲಹೆ ಕೊಟ್ಟಿದ್ದಾರೆ. ಆದರೆ ಈಗ ರೀ ಆರ್ಗನೈಸ್ ಮಾಡುವಾಗ ಕೆಲವು ಅಧಿಕಾರಿಗಳನ್ನು ತೆಗೆದು ಹೊಸದಾಗಿ ಮೂರು ಕಡೆ ಇನ್‌ಫರ್ಮೇಷನ್ ಆಫೀಸುಗಳನ್ನು ತೆರೆದಿದ್ದೀರಿ. ಇನ್ನೊಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಮೂರು ಕಡೆ ಸಿವಿಲ್ ಜಡ್ಜಸ್ ಕೋರ್ಟನ್ನು ತೆಗೆದಿದ್ದೀರಿ. ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಹೇಳಬೇಕು, ಈಗ ಇರತಕ್ಕ ಸಿವಿಲ್ ಜಡ್ಜಸ್ ಕೋರ್ಟಿಗೆ ಎಷ್ಟು ಕೆಲಸ ಇದೆ ?

ಶ್ರೀ ಎಸ್. ನಿಜಲಿಂಗಪ್ಪ.—ಹಿಂದೆ ಸಿವಿಲ್ ಜಡ್ಜಸ್ ಕೋರ್ಟು ಬೇಕು ಎಂದು ಕೇಳಿದ್ದರು, ಇಲ್ಲದೇಇದ್ದಿದ್ದರೆ ಕೊಡುತ್ತಲೇ ಇರಲಿಲ್ಲ, ಇವತ್ತು ತಾವು ಬೇಡ ಎಂದರೆ ತೆಗೆದು ಬಿಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಕೇಳಲಿಲ್ಲ, ನಮ್ಮ ಡಿಸ್ಟ್ರಿಕ್ಟ್‌ನವರು ಕೇಳಿದ್ದಾರೆ.

ಶ್ರೀ ಎಸ್. ನಿಜಲಿಂಗಪ್ಪ.—ಇಪ್ಪತ್ತು ವರ್ಷದಿಂದ ಕೇಳುತ್ತಾ ಇದ್ದಾರೆ. ಸಾಕಾದಷ್ಟು ಕೆಲಸ ಇಲ್ಲ ಎಂದರೂಕೂಡ ಕಕ್ಷಿಗಾರರಿಗೆ ಅವರ ಸ್ಥಳದಲ್ಲೇ ನ್ಯಾಯ ದೊರಕಿಸುವುದು ಕರ್ತವ್ಯ ಎಂದು ಹೇಳಿ ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಮಂಡ್ಯ ಮುಂತಾದ 6 ಜಿಲ್ಲೆಗಳವರು ಕೇಳಿದ್ದರಿಂದ ಕೊಡಬೇಕಾದ್ದು ನ್ಯಾಯ ಎಂದು ಹೇಳಿ ಅವನ್ನು ತೆರಿದಿದ್ದೇವೆ.

6.00 P.M.

SRI H. R. KESHAVA MURTHY.—Sir, now that it is 6 'O'Clock, we may rise for the day.

MR. SPEAKER.—I am told that there has been agreement to sit till 6.30 P.M. to-day. I want to consult the Leader of the Opposition.

SRI S. SIVAPPA.—Sir, it is now 6 O'Clock.

MR. SPEAKER.—If he does not make a practical suggestion, I cannot consider it.

SRI S. SIVAPPA.—I am prepared to sit the whole of next week. We shall finish whatever that is possible by tomorrow.

MR. SPEAKER.—Let us come to some understanding. Whatever that is possible will be finished unless he obstructs. Let us have a more constructive and friendly approach. We are all interested in getting through the work.

SRI S. SIVAPPA.—We shall take some light work to-morrow.

SRI RAMAKRISHNA HEGDE (Minister for Finance).—When we decided to extend the time for the consideration of the Sales Tax (Amendment) Bill, the Leader of the Opposition agreed that we might sit for one hour more to-day.

SRI S. SIVAPPA.—No, Sir.

MR. SPEAKER.—Let us try to co-operate. We have already spent one hour. Three hours are allotted to the Supplementary Estimates. If they ask for 1½ hours, how can I refuse ? I am trying to co-ordinate.

Sri S. NIJALINGAPPA.—Sir, we can sit till 6.00 p. m. if the House is agreeable.

MR. SPEAKER.—Sri Deve Gowda may continue his speech.

ಶ್ರೀ ಎಸ್. ಗೋಪಾಲಗೌಡ.—ಈಗ ಆಗುವುದಿಲ್ಲ ಸ್ವಾಮ್ಮಿ.

MR. SPEAKER.—Order, Order—the member may retire if he does not want to sit. Am I to receive dictation from him.

ಶ್ರೀ ಎಸ್. ಗೋಪಾಲಗೌಡ.—ಆಗುವುದಿಲ್ಲ ಸ್ವಾಮಿ.

MR. SPEAKER.—Can't the Member understand the meaning of Order, Order? Order—Order, means that the member must resume his seat. If the member finds it inconvenient, I will not force him to sit; he may retire. He must appeal to the House and say "we will not sit". Did I ask any permission from him? This kind of approach time and again.....

ಶ್ರೀ ಎಸ್. ಗೋಪಾಲಗೌಡ.—ಆಗುವುದಿಲ್ಲ ಸ್ವಾಮಿ.

MR. SPEAKER.—Order—Order. What does the member mean by that? This kind of exhibition of temper! I am saying that I am assessing the feeling and opinion of the House. Don't have I a right to do that? I have always found this particular member saying as if he is a dictator in the House. I am asking the House. Am I to take directions from a member? Does it mean that all the rest should not sit because he is not willing to sit? Sri H. D. Deve Gowda will continue.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಪತಿಗಳೇ, ಸಿವಿಲ್ ಜಡ್ಜ್ ಕೋರ್ಟು ಬಗ್ಗೆ ಆಕ್ಷೇಪಣೆ ಇದ್ದುದು ಇಷ್ಟೇ. ರೈತರಿಗೆ ಸಾರ್ವಜನಿಕರಿಗೆ ಸುಲಭ ರೀತಿಯಲ್ಲಿ ನ್ಯಾಯ ದೊರೆಯಬೇಕು ಎಂದು ಶ್ಲಾಘಿಸಿದರೂ ಕೂಡ ಜಿಲ್ಲಾ ಕೋರ್ಟುಗಳಿಗೆ ಸಾಕಷ್ಟು ಕೆಲಸ ಇದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಿ ಮಂಜೂರು ಮಾಡುವುದು ಒಳ್ಳೆಯದು. ಅಲ್ಲಿ ಕೋರ್ಟು ಕೊಟ್ಟಿದ್ದು ತಪ್ಪು ಎಂಬ ಅಭಿಪ್ರಾಯವಲ್ಲ. ಒಂದೊಂದು ಕೋರ್ಟಿಗೆ ಕೆಲಸ ಇದೆಯೇ ? ಕೊಟ್ಟಿದ್ದಕಡೆ ಸರಿಯಾಗಿ ವಿಮರ್ಶೆ ಮಾಡಬೇಕು. ಹಣ ಖರ್ಚು ಮಾಡಬೇಕಾಗುತ್ತದೆ. ಮೈಸೂರು ದೇಶದಲ್ಲಿ ಸಿವಿಲ್ ಜಡ್ಜ್ ಕೋರ್ಟು ಐದು ಜಿಲ್ಲೆಯಲ್ಲಿ ನ್ಯಾಯ ದೊರಕಿಸಿಕೊಡುತ್ತಿದೆ. ಪ್ರತಿಯೊಂದು ಜಿಲ್ಲೆಗೆ ಒಂದು ಕೋರ್ಟು ಇರಬೇಕ್ಕ ಅವಶ್ಯಕತೆ ಇದೆಯೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಮಾನ್ಯ ಮಂತ್ರಿಗಳು ಸರಕಾರವ ನಿಲುವನ್ನು ಸಭೆಗೆ ತಿಳಿಸಬೇಕು ಎಂಬ ಅಭಿಪ್ರಾಯ ವ್ಯಕ್ತ ಪಡಿಸುತ್ತೇನೆ.

ಇನ್ನು ಜನರಲ್ ಅಡ್ಮಿನಿಷ್ಟ್ರೇಷನ್ ಐಟಂನಲ್ಲಿ ಹಣ ಕೇಳಿದ್ದೀರಿ. ಈ ಬಗ್ಗೆ ಒಂದು ಪ್ರಶ್ನೆ ಕೇಳಲು ಇಷ್ಟಪಡುತ್ತೇನೆ. ಸೆಕ್ರೆಟರಿಯೆಟ್ ಆಡಳಿತದಲ್ಲಿ ಒಂದು ಕ್ಯಾಂಟೀನ್ ನಡೆಸುವ ಅವಶ್ಯಕತೆ ಏನು ಇದೆ. ಈ ಕ್ಯಾಂಟೀನ್ ನಡೆಸುವುದಕ್ಕೆ ಹಣ ಒದಗಿಸಲಾಗಿದೆ. ಸೆಕ್ರೆಟರಿಯೆಟ್ ಕ್ಯಾಂಟೀನ್ ವಿಚಾರದಲ್ಲಿ ಒಂದು ಲಕ್ಷ ರೂಪಾಯಿ ಲೋನ್ ಕೊಡುವುದಕ್ಕೆ ಕಾರಣವೇನು ? ಹಣವನ್ನು ಇಷ್ಟು ಹಗುರವಾಗಿ ವ್ಯಯ ಮಾಡುವುದಕ್ಕೆ ಯಾರೂ ಹೋಗಬಾರದು. ಇದನ್ನು ಪ್ರಾರಂಭಿಸುವ ಅವಶ್ಯಕತೆ ಇದ್ದಿತೇ ? ಈ ಕ್ಯಾಂಟೀನ್ ನಡೆಸುವುದಕ್ಕೆ ಅನೇಕ ಅಧಿಕಾರಿಗಳ ನೇಮಕ ಮಾಡಲಾಗಿದೆ. ಒಬ್ಬ ಗೆಜೆಟೆಡ್ ಆಫೀಸರ್‌ಕೂಡ ಇದ್ದಾರೆ. ಒಂದು ಲಕ್ಷ ರೂಪಾಯಿ ಲೋನ್ ಕೊಡುವುದು ಸರಿಯೇ ಎಂಬುದನ್ನು ಯೋಚನೆ ಮಾಡಬೇಕು. ಈ ವಿಚಾರದಲ್ಲಿ ಏನೇನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪಂಪುಸೆಟ್ಟುಗಳನ್ನು ಕೊಡುವ ಬಗ್ಗೆ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಹಣವನ್ನು ಒದಗಿಸಿದ್ದಾರೆ. ಆ ರೀತಿ ಕೊಡುವ ಉದ್ದೇಶವೇನೋ ಒಳ್ಳೆಯದು, ಶ್ಲಾಘನೀಯವಾದುದು. ಆದರೆ ಅವನ್ನು ರೈತರಿಗೆ ಒದಗಿಸಿದಮೇಲೆ ಅದರಿಂದಾಗತಕ್ಕ ಅನಾಹುತಗಳ ಬಗ್ಗೆ ಸರ್ಕಾರದವರೇ ಜವಾಬ್ದಾರಿಯನ್ನು ವಹಿಸಬೇಕು. ಪ್ರತಿ ತಾಲ್ಲೂಕಿಗೂ ಸಹಸ್ರಾರು ಪಂಪುಸೆಟ್ಟುಗಳನ್ನು ಕೊಡುವ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ. ಇವರು ಕೊಡತಕ್ಕ ಪಂಪುಸೆಟ್ಟುಗಳನ್ನು ತಾಲ್ಲೂಕುಬೋರ್ಡಿನಲ್ಲಿ ಮೇಂಟೇನ್ ಮಾಡುವ ಒಂದು ವಿಜಿನ್ಸ್ ಇದೆ. ಅದು ರೈತರಿಂದ ಹೈರ್ ಚಾರ್ಜಸ್ಸನ್ನು ಕಲೆಕ್ಟ್‌ಮಾಡಬೇಕಾಗಿದೆ. ಆದರೆ ಅವನ್ನು ನೋಡಿಕೊಳ್ಳುವ ಡ್ರೈವರ್ ಮತ್ತು ಮೆಕಾನಿಕ್‌ಗಳಿಗೆ ಹಣವನ್ನು ಯಾರು ಕೊಡುವುದು, ಇವರಿಗೆ ಕೊಡತಕ್ಕ ಹಣವನ್ನು ಯಾರಿಂದ ವಸೂಲುಮಾಡುವುದು—ಇಂತಹ ವಿವರಗಳು ಇರತಕ್ಕ ಒಂದು ಸರ್ಕಾರಿ ಆಜ್ಞೆಯೂ ಇದರಲ್ಲಿಲ್ಲ. ತಾಲ್ಲೂಕ್ ಬೋರ್ಡಿನವರು ಇಷ್ಟು ಹಣವನ್ನು ರೈತರಿಂದ ವಸೂಲ್ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಇವರು ವಿಚಾರಮಾಡಿ ನೋಡಬೇಕು. ಈ ವಿಚಾರಗಳ ಬಗ್ಗೆ ಸರ್ಕಾರದವರು ಈ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಹೆಚ್ಚಿಗೆ ವಿವರಗಳನ್ನು ಕೂಟ್ಟಿದ್ದರೆ ಚೆನ್ನಾಗಿತ್ತು. ಪಂಪುಸೆಟ್ ಉಪಯೋಗಿಸುವ ರೈತನಿಗೆ ಬಾಡಿಗೆಯನ್ನು ನಿಗದಿ ಮಾಡಬೇಕು. ಡಿಪ್ರಿಸಿಯೇಷನ್ ಚಾರ್ಜಸ್ಸನ್ನು ಲೆಕ್ಕಹಾಕಿ ಅದರಮೇಲೆ ಪಂಪುಸೆಟ್ಟುಗಳನ್ನು ಬಾಡಿಗೆಗೆ

(ಶ್ರೀ ಕೆಚ್. ಡಿ. ದೇವೇಗೌಡ)

ಕೊಡಬೇಕು. ಅದರಮೇಲೆ ಇನ್‌ವೆಸ್ಟ್ ಮಾಡುವ ಹಣಕ್ಕೆ ಅಪಾಯವಾಗದ ರೀತಿಯಲ್ಲಿ ಸರಿಯಾದ ಮುಂಜಾಗ್ರತೆ ಕಾರ್ಯಕ್ರಮಗಳನ್ನು ಮಹಿಸಬೇಕು. ಶ್ರೀ ಮುಕ್ಕಣ್ಣಪ್ಪನವರು ಟ್ರಾಕ್ಟರುಗಳನ್ನು ಕೊಂಡು ಕೊಳ್ಳುವುದಕ್ಕೆ ಇವರು ಕೊಡುವ ಸಾಲ ಸೇಕಡ 8 ರುತೆ ಎಂಬುದಾಗಿ ಹೇಳಿದರು. ಆದರೆ ರಿಜರ್ವ್ ಬ್ಯಾಂಕಿನವರು ಇವರಿಗೆ ಸೇಕಡ 9ರುತೆ ಮಾಡಿರುವಾಗ ಇವರೇಕೆ ಈರೀತಿ ಕೊಡುತ್ತಾರೋ ಗೊತ್ತಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ರಿಜರ್ವ್ ಬ್ಯಾಂಕಿನವರು ಸೇಕಡ 9ರುತೆ ಎಲ್ಲಿ ಕೊಡುತ್ತಿದ್ದಾರೆ ?

ಶ್ರೀ ಎಚ್. ಡಿ. ದೇವೇಗೌಡ.—ರಿಜರ್ವ್ ಬ್ಯಾಂಕಿನವರು ಕೋ-ಆಪರೇಟಿವ್ ಸೊಸೈಟಿ ಮುಖಾಂತರ ಸಾಲ ಕೊಡಬೇಕಾದರೆ ಸೇಕಡ 4ರುತೆ ಕೊಡುತ್ತಾರೆ.

ಇನ್ನು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಲ್ಲಿ ರೈತನಾದವನಿಗೆ ಜಮೀನು ಅಧಾರಮಾಡಿಕೊಂಡು ಸೇಕಡ 9ರಂತೆ ಸಾಲವನ್ನು ಪ್ರೈಮರಿ ಕೋ-ಆಪರೇಟಿವ್ ಸೊಸೈಟಿ ಮುಖಾಂತರ ಕೊಡುತ್ತಾರೆ. ಈ ಸಾಲವನ್ನು ಕೊಡುವ ಸನ್ನಿವೇಶದಲ್ಲಿ ಟ್ರಾಕ್ಟರುಗಳನ್ನು ಕೊಳ್ಳುವುದಕ್ಕೂ ಅದೇ ತರಹ ಅನುಕೂಲಗಳನ್ನು ರೈತರಿಗೆ ಕಲ್ಪಿಸಿಕೊಡುವೆಕೆಂದು ನಾನು ಹೇಳುತ್ತೇನೆ. ಇದರಲ್ಲಿ ಯಾರೂ ದಾಕ್ಷಿಣ್ಯಮಾಡುವ ಅವಶ್ಯಕತೆ ಇಲ್ಲ. ಸರ್ಕಾರದವರು ರೈತರಿಂದ ಎಲ್ಲಾ ಸವಲತ್ತುಗಳನ್ನು ಪಡೆಯುವಾಗ ಅವರಿಗೆ ಸಾಲವನ್ನು ಕಡಿಮೆ ದರದಲ್ಲಿ ಕೊಡುವ ಅವಶ್ಯಕತೆಯೇನಿದೆ ಎಂದು ನಾನು ಪ್ರಶ್ನೆಮಾಡಬೇಕಾಗಿದೆ.

ಇನ್ನು ಗೋಣಿ ಚೀಲಗಳನ್ನು ಇವರು ಕೊಂಡುಕೊಳ್ಳುವುದರಲ್ಲಿ ಆಹಾರ ಇಲಾಖೆಯಲ್ಲಿ ಇವರು ಕೈಸುಟ್ಟುಕೊಂಡಿದ್ದಾರೆ. 50 ಲಕ್ಷ ರೂಪಾಯಿಗಳಷ್ಟು ಗೋಣಿ ಚೀಲಗಳನ್ನು ಇವತ್ತು ತೆಗೆದುಕೊಂಡರೆ ನಾಳೆ 15 ದಿವಸಗಳಾದಮೇಲೆ ಲೆಕ್ಕ ನೋಡಿದರೆ ಅದೇನೂ ಸರಿಯಾಗಿ ಸಿಕ್ಕುವುದಿಲ್ಲ. ಆದ್ದರಿಂದ 50 ಲಕ್ಷ ರೂಪಾಯಿಗಳನ್ನು ಇವರು ಏನು ಇನ್‌ವೆಸ್ಟ್ ಮಾಡಿದ್ದಾರೋ ಅವಕ್ಕೆ ಮುಂಜಾಗರೂಕತೆ ಎಚ್ಚರಿಕೆಯನ್ನು ಸರ್ಕಾರದವರು ವಹಿಸುವುದು ಸೂಕ್ತ. ಅದರ ಬಗ್ಗೆ ಲೆಕ್ಕ ಪತ್ರಗಳನ್ನು ಸರಿಯಾಗಿಡುವುದು ಬಹಳ ಒಳ್ಳೆಯದು. ಅದಕ್ಕಾಗಿ ಸೂಕ್ತ ವ್ಯವಸ್ಥೆಮಾಡಬೇಕು. ಆ ರೀತಿ ಮಾಡದೇ ಇರುವುದರಿಂದ ಇತ್ತೀಚೆಗೆ ಹಳೆಯ ಚೀಲಗಳನ್ನು ಬದಲಾಯಿಸಿ ಹೊಸ ಚೀಲಗಳನ್ನು ಲಪಟಾಯಿಸುವುದು ಆಗಿದೆ. ಇದರಿಂದ ಎಷ್ಟು ಲುಕ್ಸಾನು ಸರ್ಕಾರಕ್ಕೆ ಆಗಿರುವುದು ಗೊತ್ತಿದೆ. ಇದಕ್ಕಾಗಿ ಮುಂಜಾಗರೂಕತೆ ಇರಬೇಕು.

ಒಟ್ಟಿನಲ್ಲಿ ನಾನು ಹೇಳುವುದಾದರೆ ಈ ಸಪ್ಲಿಮೆಂಟರಿ ಡಿಮ್ಯಾಂಡ್‌ನಲ್ಲಿ ಆಫೀಸರುಗಳ ಪಟ್ಟು ನಿರ್ಮಾಣ ಮಾಡುವುದಾಗಿದೆ. ಪ್ರೊಡಕ್ಟಿವ್ ವರ್ಕ್ಸ್‌ನಲ್ಲಿ ಪಂಪುಸೆಟ್ಟುಗಳನ್ನು ಕೊಡುವುದು ಒಂದನ್ನು ಬಿಟ್ಟರೆ ಬಾಕಿಯೆಲ್ಲಾ ಅನ್ ಪ್ರೊಡಕ್ಟಿವ್ ವರ್ಕ್ಸ್ ಆಗಿವೆಯೆಂದು ನಾನು ಹೇಳುತ್ತೇನೆ. ಕೊನೆಯದಾಗಿ ಈ ಸಪ್ಲಿಮೆಂಟರಿ ಡಿಮ್ಯಾಂಡಿಗೆ ನನ್ನ ಪೂರ್ಣ ವಿರೋಧವಿದೆಯೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

SRI G. V. GOWDA (Palya).—Mr. Speaker, Sir, there are several institutions where we could see that there is no proper control over the expenditure and that is the reason why Government often comes before this House to seek the approval of this House under the guise of New Service, that it was not foreseen when the Annual Budget was placed before this House. As was pointed out by my friend, except one item which goes for productive work, *i.e.*, pumps, the rest of the items of nearly 2½ crores of rupees, most of it, goes for unproductive works. These could have been safely taken up next year and included in the next year's budget. Thereby, it would have facilitated us to appreciate the correct financial position of the State. From the Appropriation Accounts, we can see several departments have not utilised the amount and there are instances where without utilising the amount provided in the original budget, Supplementary Demands have been made often and have drawn. This shows that there is no scrutiny over the expenditure and no departmental head is able to assess the exact amount that he would be able to spend before March. We can see this from the Audit Reports. That shows, there is no honest attempt to have control over proper assessment of things, especially, on the expenditure side.

I may bring to the notice of the Hon'ble Minister that there are several instances in the sales-tax department where penalties have not been imposed; where penalties are imposed they have not been recovered. If such things are allowed, naturally, it will have bad strain on the finances of the State. A separate Deputy Commissioner has been appointed with staff and the Government has to spend Rs. 20,000 for that department. I do not know whether another Deputy Commissioner is necessary. As per our information, the sales tax for the year 1965-66 must be not less than Rs. 18 crores in view of the prevailing rates of prices.

Then, the bifurcating of two taluks could have waited for some time. The Constitution provides for so many things and we have not implemented many of them. This could have been done after assessing the work. The Chief Minister knows that my Taluk is the biggest one. We wanted to approach the Government to bifurcate this taluk. But, knowing the emergency condition, we did not approach the Government. Especially, in South Kanara the taluks are very big and they need bifurcation.. Such being the case, I do not know why Puttur and in Bidar district another taluk is bifurcated. By this, lot of establishment charges will have to be incurred. We know what the Tahsildar or the Block Development Officer does. I earnestly appeal to the Chief Minister to give the local officers proper work and see that large establishment charges are avoided.

So far as Demand No. 15 is concerned, the Hon. Minister for Food has promised that he will fight for zonal system. Unless it is done, it is very difficult to get foodgrains. In Item No. 2, Rs. one lakh is sought for sanction. That is for the additional staff to cope with the increased work on account of introduction of Informal Rationing in several cities and towns. In some parts of Madras ragi is sold at the rate of Rs. 50 ; people manage to get it to our State but in Bangalore it costs Rs. 90 to Rs. 100. If our Chief Minister could get permission to get ragi from surplus districts and bring it to Mysore State, naturally it could be supplied at Rs. 60 per quintal. That step may be taken.

So far as Item No. 20 is concerned, in my opinion, the amount provided for the purchase of pump sets is too inadequate.

MR. SPEAKER.—So the Member supports it.

SRI G. V. GOWDA.—The Government could have made more provision.

In Demand No. 23, it is said that the Government is eligible for Central assistance. We do not know what Intensive Agriculture Development has been achieved in our State. For this purpose, Government have created the posts of a Joint Registrar, Superintendent, clerks, typists, etc. In fact, it is very painful for me to say that many of our ryots have not felt the existence of the Agriculture Department ; it is a very sorry state of affairs. As in the forward and western contries, unless the agriculturist is made to know what exactly is the position of the Agriculture Department and what kind of help to an ordinary agriculturst could be given from it, there is no use in increasing the establishments. It does no good to them excepting creation of new posts and providing jobs to some.

(SRI G. V. GOWDA)

So far as the purchase of gunny bags for procurement of foodgrains is concerned, I do not dispute about the rate. If the Government assumes monopoly trade, they are going to appoint agents. It is the business of those gents to prepare themselves by purchasing the necessary equipment. Why should the Government pay for it? Government has to purchase 25 lakhs gunnies for Rs. 50 lakhs and sell it to the agents later. Why should the Government undertake this task? According to the terms and conditions of the Food Corporation, agents are required to equip themselves. For this, why should Government make payment? Of course, it is said that the cost of the gunny bags will be recovered from the agents after their appointment and sold to them. In that transaction, Government will definitely sustain loss. The Government purchases at the rate of Rs. 2 or Rs. 3 and it is likely to lose its value by the time it is sold to the agents who claim depreciation. We are unnecessarily taking this risk. I do not know why Government has thought of purchasing and selling gunny bags to the agents and becoming another trader in gunnies.

On the Kabini Project, I know that the work is very slow. Unless sufficient funds are provided, it is not possible to complete it within the scheduled time. In this connection, I appeal to the Hon'ble Chief Minister to see that more funds are made available for the minor irrigation works. I would suggest to the Government to dig at least one lakh of irrigation wells. My scheme costs 6 crores of rupees for each year. For 30 crores of rupees, we can have one lakh of wells which would irrigate 10 lakhs of acres in five years. It works out to Rs. 300 per acre. We can take two crops. The irrigated area will be 10 acres per well. Ordinary medium and major works cost more than Rs. one thousand per acre. The Madras Government is already contemplating to have three lakhs of wells during the Fourth Plan because they have exhausted the building of all irrigation potential, by completing all their dams. Our Hon'ble Chief Minister has to take special interest so far as minor irrigation is concerned because the works promised, have not been started as yet They have to be completed by June. But the Government have not commenced the work anywhere in the State.

The other items do deserve our support.

ಶ್ರೀ ಬಿ. ಭಾಸ್ಕರ ಶೆಟ್ಟಿ. (ಕಾಪು).—ಸ್ವಾಮಿ, ಈಗಾಗಲೆ ಈ ಸಭೆಯ ಮುಂದೆ ಮೆಂಡಿಸಿರತಕ್ಕ 3,25,33,000 ರೂಪಾಯಿಗಳ ಸಪ್ಲಿಮೆಂಟರಿ ಡಿಮ್ಯಾಂಡನ್ನು ನಾನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ.

ಸ್ವಾಮಿ, ದೇಶದಲ್ಲಿ ತುರ್ತು ಪರಿಸ್ಥಿತಿ ಇದ್ದು ಆನ್ನದ ಸಮಸ್ಯೆ ತಾಂಡವಾಡುತ್ತಿರುವ ಸಂದರ್ಭದಲ್ಲಿ ನಮ್ಮ ದೇಶದ ರಾಜ್ಯಪಾಲರ ನಿವೇಶನದ ರಿಪೇರಿಗಾಗಿ ತಾವು ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಆದು ಡಿಮ್ಯಾಂಡ್ ನಂಬರ್ 10ರಲ್ಲಿ ಬರುತ್ತದೆ. ಆದರ ಹೆಡ್ ಯಾವುದೆಂದರೆ Maintenace and repairs of offical Residences ನೀವು ಆದಕ್ಕೆ additional sanction ಎಂದು ಕೇಳುತ್ತಾ ಇದ್ದೀರಿ. ಈ ದೇಶದಲ್ಲಿ ಗುಡಾಂತರ ಪರಿಸ್ಥಿತಿ ಇರುವಾಗ ಇಷ್ಟು ದೊಡ್ಡ ಮೊತ್ತವನ್ನು ನೀವು Staff quarters ಗಳಿಗಾಗಿ ಮತ್ತು ರಾಜ್ಯಪಾಲರ ನಿವೇಶನದ ರಿಪೇರಿ ಖರ್ಚಿಗಾಗಿ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿರುವುದು ನನಗೆ ಹಾಸ್ಯವಾಗಿ ಕಾಣುತ್ತದೆ. ನಾನು ಒಂದು ಪ್ರಶ್ನೆಯನ್ನು ಕಳಿಸಿದ್ದೆ. ಅದರಲ್ಲಿ, ಈ ಪ್ರಸಕ್ತ ತುರ್ತುಪರಿಸ್ಥಿತಿಯಲ್ಲಿ ಆಚರಣೆಯಲ್ಲಿ ತಂದಿರುವ ಉಳಿತಾಯ ಯೋಜನೆಗಳು

ಯಾವುವು ಎಂದು ಕೇಳಿದ್ದೆ. ಅದಕ್ಕೆ ಕೊಟ್ಟಿರುವ ಉತ್ತರವನ್ನು ನೋಡಿದರೆ ಅದು ಹಾಸ್ಯಾಸ್ಪದವಾಗಿ ಕಾಣುತ್ತದೆ. ಆದರಲ್ಲಿ ಬರೆದಿದ್ದಾರೆ, ಸ್ಟೇಷನರಿ, ಗುಂಡುಸೂಜಿ, ಪುಂಕಾದವನ್ನು ಸರಬರಾಜು ಮಾಡುವುದರಲ್ಲಿ, ಉಪ ಹೋಗಿಸುವುದರಲ್ಲಿ ಖೋತಾ ಮಾಡಿದ್ದೇವೆಂದು. ಇದರಲ್ಲಿ ಎಷ್ಟು ಹಣ ಉಳಿಯ ಬಹುದು ?

ಇನ್ನು ಅನಾವಶ್ಯಕವಾಗಿ ಟೂರನ್ನು ಮೊದಲಿನಂತೆ ಕರಗಿಸಿ ರೈಲಿನಲ್ಲಿ ಪ್ರಯಾಣವನ್ನು ಮಾಡಬಾರದು, ಫರ್ ಕಂಡೀಷನ್ಡ್ ರೈಲಿನಲ್ಲಿ, ವಿಮಾನದಲ್ಲಿ ಹೋಗಬಾರದು ಎಂದು ಏನೇನೋ ಹೇಳಿದ್ದಾರೆ. ಆದರೂ ಸಹ ಮಂತ್ರಿಗಳು ಮತ್ತು ಅಧಿಕಾರಿಗಳು ಟೂರ್‌ಗಳನ್ನು ಮಾಡುತ್ತಿದ್ದಾರೆಯೇ ವಿನಾ ಈ ತುರ್ತು ಪರಿಸ್ಥಿತಿಯಲ್ಲೂ ಕೂಡ ಕಡಿಮೆ ಮಾಡಲಿಲ್ಲ. ಒಂದು ರೂಪಾಯಿಯನ್ನು ಸಹ ಈ ತುರ್ತುಪರಿಸ್ಥಿತಿಯಲ್ಲಿ ಖರ್ಚು ಮಾಡುವುದು ಸರಿಯಲ್ಲವೆಂದು ನಾನು ಹೇಳುತ್ತೇನೆ.

ಇನ್ನು ರಾಮಚಂದ್ರ ರಾವ್ ಕಮಿಟಿ ರಿಪೋರ್ಟನ್ನು ನೀವು ತಯಾರು ಮಾಡಿದ್ದೀರಿ. ಆ ಕಮಿಟಿಯ ಕೆಲಸ ಕಾರ್ಯಗಳಿಗೋಸ್ಕರ ಎಷ್ಟೋ ಹಣವನ್ನು ಖರ್ಚುಮಾಡಿದ್ದೀರಿ. ಆ ಕಮಿಟಿಗೋಸ್ಕರ ಸುಮಾರು 2 ಲಕ್ಷ ರೂಪಾಯಿಯಾದರೂ ಖರ್ಚಾಗಿರಬಹುದೆಂದು ಕಾಣಿಸುತ್ತದೆ. ಅಷ್ಟು ಭಾರಿ ಹಣ ಖರ್ಚುಮಾಡಿ ತಯಾರು ಮಾಡಿದ ವರದಿಯನ್ನು ಕೋಲ್ಡ್ ಸ್ಟೋರೇಜಿನಲ್ಲಿ ಇಟ್ಟಿದ್ದೀರಿ. ಅವರ ವರದಿಯಲ್ಲಿ ಹೇಳಿದ್ದಾರೆ, ತಾಲ್ಲೂಕುಗಳ ಸಂಖ್ಯೆಯನ್ನು ಹೆಚ್ಚಿಸಬಾರದೆಂದು. ಬಿದರ್ ಜಿಲ್ಲೆಯ ವಿಚಾರವನ್ನು ಸಹ ರಾಮಚಂದ್ರ ರಾವ್ ಅವರ ರಿಪೋರ್ಟಿನಲ್ಲಿ ಬರೆದಿದ್ದಾರೆ. ಅದು ಸಣ್ಣ ಜಿಲ್ಲೆ, ಅಲ್ಲಿ ತಾಲೂಕುಗಳ ಸಂಖ್ಯೆಯನ್ನು ಹೆಚ್ಚು ಮಾಡುವ ಪರಿಸ್ಥಿತಿ ಇಲ್ಲಾ ಎಂದು. ಆದರೆ ನೀವು ಅಲ್ಲಿ ಒಂದು ತಾಲೂಕನ್ನು ಹೆಚ್ಚುಮಾಡಿ ಆ ತಾಲೂಕ್ ಆಫೀಸ್ ನೌಕರರಿಗಾಗಿ 30 ಸಾವಿರದವರೆಗೆ ಖರ್ಚು ಮಾಡುತ್ತಾ ಇದ್ದೀರಿ.

MR. SPEAKER.—The House will now rise and meet again tomorrow at 8-30 A.M.

The House adjourned at Thirty Minutes past Six of the Clock to meet again at Thirty Minutes past eight of the Clock on Saturday, the 5th February 1966.

WD 6090—GPB—500+15—23-2-1966